

# ಸಿಹಿ ಕಹಿ

SK NEWS ಕನ್ನಡ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 08 Issue : 10 Friday 12-09-2025 E-mail : maruti.b.hosamani76@gmail.com Page: 4 Price : Rs. 1/-




# ಜಿ.ಪಂ. ಸಿ.ಇ.ಓ ಪ್ರತೀಕ್ ಬಾಯಲ್‌ರವರ ಮತ್ತೊಂದು ಕರ್ಮಕಾಂಡ!!!



**ಸಿಹಿ ಕಹಿ ಸುದ್ದಿ,**

**ಉಡುಪಿ :** 2024–25 ನೇ. ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ, ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ತ್ವರಿತ ಸೇವಾ ಪೂರೈಕೆ, ಭ್ರಷ್ಟಾಚಾರ ನಿಯಂತ್ರಣ ಮತ್ತು ದಕ್ಷತೆಯನ್ನು ಹೆಚ್ಚಿಸಲು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕರ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ಮಾಡಲಾಗುವುದೆಂದು ಘೋಷಿಸಿದ್ದಂತೆ ಸರ್ಕಾರ ಕಳೆದ ಜೂನ್ 25 ರಂದು ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್–1 ಮತ್ತು ಗ್ರೇಡ್–2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವರ್ಗಾವಣೆಯನ್ನು ಯಶಸ್ವಿಯಾಗಿ ಪೂರ್ಣ ಗೊಳಿಸಿ ಇದೀಗ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವರ್ಗಾವಣೆಯನ್ನು ಕೌನ್ಸಿಲಿಂಗ್ ನಡೆಸಲಾಗುತ್ತಿದೆ.

ಬಹುಶ: ಇಲಾಖೆಯ ಸಚಿವರಾದ ಪ್ರಿಯಾಂಕ್ ಖರ್ಗೆ ಅವರಲ್ಲದೇ ಬೇರೆ ಯಾರೇ ಸಚಿವರಾಗಿದ್ದರೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆ ಕಷ್ಟ ಸಾದ್ಯವಾಗುತ್ತಿತ್ತು. ಏಕಂದರೆ ಬಹುತೇಕ ಶಾಸಕರು, ಸಚಿವರುಗಳ ಪಿ.ಎ ಗಳಾಗಿ ಪಿ.ಡಿ.ಓ ಗಳೇ ನೇಮಕ ಗೊಂಡಿರುವುದರಿಂದ ಕೌನ್ಸಿಲಿಂಗ್ ವರ್ಗಾವಣೆ ಪ್ರಕ್ರಿಯೆಗೆ ಹಿನ್ನಡೆ ಯಾಗುವ ಸಾದ್ಯತೆ ಇತ್ತು.

ಸಚಿವರಾದ ಪ್ರಿಯಾಂಕ್ ಖರ್ಗೆಯವರು ಯಾರ ಒತ್ತಡಕ್ಕೂ ಮಣಿಯದೇ ಇದೇ ಪ್ರಥಮ ಬಾರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಪಾರದರ್ಶಕವಾಗಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆಯನ್ನು ಜಾರಿ ಗೊಳಿಸಿ ನೌಕರರ ಪಾಲಿಗೆ ಆಶಾಕಿರಣವಾಗಿದ್ದಾರೆ ಎಂಬುದಾಗಿ ನೌಕರರು ಮತ್ತು ನೌಕರರ ಪೋಷಕ ವರ್ಗದವರಿಂದ ಪ್ರಶಂಸೆ ವ್ಯಕ್ತವಾಗುತ್ತಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಅತ್ಯಂತ ಕ್ಲಿಷ್ಟಕರವಾದ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆಯನ್ನು ಜಾರಿ ಗೊಳಿಸಿರುವುದು ಸಚಿವರಾದ ಪ್ರಿಯಾಂಕ್ ಖರ್ಗೆಯವರ ಬದ್ದತೆ ಮತ್ತು ದಕ್ಷತೆಯನ್ನು ತೋರಿಸುತ್ತದೆ.

ಆದರೆ ಉಡುಪಿ ಜಿಲ್ಲಾ ಪಂಚಾಯತ್ ನಲ್ಲಿ ಇದಕ್ಕೆ ತದ್ವಿರುದ್ದವಾಗಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಗೊಂಡ ನೌಕರರನ್ನು ಸರಕಾರದ ನೀತಿ ನಿಯಮಗಳಿಗೆ ವಿರುದ್ದವಾಗಿ ನಿಯೋಜನೆ ಮಾಡಲಾಗುತ್ತಿದೆ.

ಉದಾ:– ಬೈಂದೂರು ತಾಲೂಕಿನ ಉಪ್ಪುಂದ ಗ್ರಾಮ ಪಂಚಾಯತ್ ಗೆ ಕಾರ್ಯದರ್ಶಿಯಾಗಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಗೊಂಡ ನೌಕರರನ್ನು ಕೆಲವೇ ದಿನಗಳಲ್ಲಿ ಹೆಮ್ಮಾಡಿಗೆ ನಿಯೋಜನೆ ಮಾಡಿ ನಂತರ ಹೆಮ್ಮಾಡಿ ಕಾರ್ಯದರ್ಶಿ ಯವರನ್ನು ಉಪ್ಪುಂದ ಗ್ರಾಮ ಪಂಚಾಯತ್ ಗೆ ನಿಯೋಜನೆ ಮಾಡಿರುವುದು ಮತ್ತು ಅದೇ ಕಾರ್ಯದರ್ಶಿಯನ್ನು ಪುನ: ಹೆಮ್ಮಾಡಿ ಗ್ರಾಮ ಪಂಚಾಯತ್ ಗೆ ನಿಯೋಜನೆ ಮಾಡಿ ಉಪ್ಪುಂದ ಗ್ರಾಮ ಪಂಚಾಯತ್ ನ ಕಾರ್ಯದರ್ಶಿಯನ್ನು ತಾಲೂಕು ಪಂಚಾಯತ್ ಗೆ ನಿಯೋಜನೆ ಮಾಡಿರುವುದು ಉಡುಪಿ ಜಿಲ್ಲಾ ಪಂಚಾಯತ್ ನ ಸಿ.ಇ.ಓ ರವರ ಬೇಜವಾಬ್ದಾರಿತನದ ಪರಮಾಧಿಯ ನೆಡೆಯಾಗಿರುವುದು ಸಾರ್ವಜನಿಕರ ಚರ್ಚೆಗೆ ಗ್ರಾಸವಾಗಿದೆ.

ಮತ್ತೊಂದೆಡೆ ಕಾಪು ತಾಲೂಕಿನ ಬಡಾ ಗ್ರಾಮ ಪಂಚಾಯತ್ ನ ಲೆಕ್ಕ ಸಹಾಯಕಿಯಾದ ನಿರ್ಮಲಾ ಶೆಟ್ಟಿ ಇವರನ್ನು ಕೌನ್ಸಿಲಿಂಗ್ ಮೂಲಕ ಅದೇ ತಾಲೂಕಿನ ಹೆಜಮಾಡಿ ಗ್ರಾಮ ಪಂಚಾಯತ್ ಗೆ ವರ್ಗಾವಣೆ ಮಾಡಲಾಗಿದ್ದು, ಇವರನ್ನು ಸಹ ಕೆಲವೇ ದಿನಗಳಲ್ಲಿ ಪುನ: ಬಡಾ ಗ್ರಾಮ ಪಂಚಾಯತ್ ಗೆ ನಿಯೋಜನೆ ಮಾಡಲಾಗಿದೆ. ಕಳೆದ ಹದಿಮೂರು ವರ್ಷಗಳಿಂದ ಕಾಪು ತಾಲೂಕಿನ ಬಡಾ ಗ್ರಾಮ ಪಂಚಾಯತ್ ನಲ್ಲಿ ಸತತವಾಗಿ ಒಂದೇ ಕಡೇ ಠಿಕಾಣಿ ಹೂಡಿದ್ದ ಲೆಕ್ಕ ಸಹಾಯಕಿಯನ್ನು ಹೆಜಮಾಡಿ ಗ್ರಾಮ ಪಂಚಾಯತ್ ಗೆ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಗೊಂಡಿರುವ ಪ್ರಕ್ರಿಯೆಯ ಕುರಿತು ಸ್ಥಳೀಯ ಗ್ರಾಮಸ್ಥರು ಇಲಾಖೆಯ ಸಚಿವರನ್ನು ಪ್ರಶಂಸೆ ಮಾಡುತ್ತಿದ್ದ ಸಂದರ್ಭದಲ್ಲೇ ಏಕಾಏಕಿಯಾಗಿ ಪುನ: ಕೆಲವೇ ದಿನಗಳಲ್ಲಿ ಮತ್ತದೇ ಬಡಾ ಗ್ರಾಮ ಪಂಚಾಯತ್ ಗೆ ಮರು ನಿಯೋಜನೆ ಮಾಡಿಸಿ ಕೊಳ್ಳುತ್ತಾರೆಂದರೆ ಇದರಲ್ಲೇ ಸ್ಪಷ್ಟವಾಗಿ ಅರ್ಥವಾಗುತ್ತದೆ ಬಡಾ ಗ್ರಾಮ ಪಂಚಾಯತ್ ಶ್ರೀಮಂತ ಪಂಚಾಯತ್ ಗಳಲ್ಲಿ ಒಂದಾಗಿದ್ದು ಅಲ್ಲಿ ಹಣ ಮಾಡುವ ಉದ್ದೇಶದಿಂದ ಪುನ: ಅದೇ ಗ್ರಾಮ ಪಂಚಾಯತ್ ಗೆ ಹಿರಿಯಅಧಿಕಾರಿಗಳಿಗೆ ಲಂಚಾ ನೀಡಿ ನಿಯೋಜನೆ ಮಾಡಿಸಿ ಕೊಂಡಿರುವುದಾಗಿ ಉಡಾಫೆ ಯಿಂದ ವರ್ತಿಸುತ್ತಾ ನನ್ನನ್ನು ಬಡಾ ಪಂಚಾಯತ್ ನಿಂದ ಯಾರೂ ವರ್ಗಾವಣೆ ಮಾಡಿಸಲು ಸಾದ್ಯವಾಗುವುದಿಲ್ಲ ಮತ್ತು ನಾನು ಇದೇ ಪಂಚಾಯತ್ ನಲ್ಲಿ ಮುಂದುವರೆಯುವುದಾಗಿ ಮತ್ತು ಪಿ.ಡಿ.ಓ ಗಿಂತ ನಾನೇ ಸೀನಿಯರ್ ಆಗಿದ್ದು, ನಿವೃತ್ತಿ ಯಾಗುವ ವರೆಗೂ ಇದೇ ಪಂಚಾಯತ್ ನಲ್ಲಿ ಮುಂದುವರಿಯುವುದಾಗಿ ಬಡಾಯಿ ಕೊಚ್ಚಿ ಕೊಳ್ಳುತ್ತಾಳೆ ಮತ್ತು ಇವರು ಇತ್ತೀಚಿಗೆ ಅಕ್ರಮ ಸಂಪತ್ತಿನಿಂದ ಐಷರಾಮಿ ಬಂಗಲೆ ಕಟ್ಟಿಸಿರುವುದಾಗಿ ಸ್ಥಳೀಯ ಗ್ರಾಮಸ್ಥರು ಗುಸು ಗುಸು ಮಾತಾಡಿ ಕೊಳ್ಳುತ್ತಿದ್ದಾರೆ ಎಂದು ಸುದ್ದಿ ಆಗಿದೆ.

ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ಆಯಾ ಕಟ್ಟಿನ ಸ್ಥಳಗಳಲ್ಲಿ ಹತ್ತಾರು ವರ್ಷಗಳಿಂದ ಒಂದೇ ಸ್ಥಳದಲ್ಲಿ ಠಿಕಾಣಿ ಹೂಡಿದ್ದ ಅಧಿಕಾರಿಗಳನ್ನು ಇದೇ ಪ್ರಥಮ ಬಾರಿಗೆ ಕೌನ್ಸಿಲಿಂಗ್ ಮೂಲಕ ಕಡ್ಡಾಯ ವರ್ಗಾವಣೆ ಗೊಳಿಸಿದ್ದ ಸರಕಾರದ ನೀತಿ ನಿಯಮಗಳನ್ನು ಗಾಳಿಗೆ ತೂರಿ ಉಡುಪಿ ಜಿಲ್ಲಾ ಪಂಚಾಯತ್ ನ ಸಿ.ಇ.ಓ ಪ್ರತೀಕ್ ಬಾಯಲ್ ರವರು ಇಂತಹ ಹಲವಾರು ಪ್ರಕರಣಗಳಲ್ಲಿ ತಮ್ಮದೇ ಶೈಲಿಯಲ್ಲಿ ಬೇಕಾಬಿಟ್ಟಿ ವರ್ಗಾವಣೆ/ನಿಯೋಜನೆ ಮಾಡುತ್ತಿರುವುದನ್ನು ಜಿಲ್ಲೆಯ ಶಾಸಕರು / ಸಂಸದರು / ಉಸ್ತುವಾರಿ ಸಚಿವರು, ಇತರೆ ಸ್ಥಳೀಯ ಜನ ಪ್ರತಿನಿಧಿಗಳು ಸಿ.ಇ.ಓ ರವರ ನಡೆಯನ್ನು ಪ್ರಶ್ನೆ ಮಾಡದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಮತ್ತು ಇವರ ಕಾನೂನು ಬಾಹಿರ ವರ್ಗಾವಣೆ / ನಿಯೋಜನೆ ವಿರುದ್ದ ಇಲಾಖೆಯ ಸಚಿವರಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ಶಿಸ್ತು ಕ್ರಮ ಜರುಗಿಸುವಂತೆ ದೂರು ಸಲ್ಲಿಸುವುದಾಗಿ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿರುತ್ತಾರೆ ಎಂದು ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಚಾನೆಲ್ ನ ಇದರಲ್ಲಿ ಎರಡು ಮಾತಿಲ್ಲದೆ ಸಾರ್ವಜನಿಕರ ನಿತ್ಯ ನಿರಂತರವಾಗಿ ಬುದ್ಧತೆ, ಮತ್ತು ನಿಷ್ಠೆಯಿಂದ ಸದಾ ಕಾಲ ಸಾರ್ವಜನಿಕರ ಜೊತೆ ಇರುತ್ತೆ ಅನ್ನುವುದು ಸ್ಪಟಿಕದಷ್ಟೇ ಸ್ಪಷ್ಟವಾಗಿದೆ.

**ವರದಿ :ಆರತಿ.ಗಿಳಿಯಾರು.ಉಡುಪಿ**

## ಸಡಗರ ಸಂಭ್ರಮದಿಂದ ಜರುಗಿದ ಈದ್ ಮಿಲಾದ್ ಹಬ್ಬದ ಮೆರವಣಿಗೆ ಮಾಜಿ ಶಾಸಕ ಆನಂದ ನ್ಯಾಮಗೌಡ ಭಾಗಿ



**ಜಮಖಂಡಿ :** ಪ್ರವಾದಿ ಮಹಮ್ಮದ್ ಪೈಗಂಬರ್ ಜನ್ಮದಿನದ ನಿಮಿತ್ಯವಾಗಿ ನಡೆಯುವ ಶಾಂತಿ, ಸೌಹಾರ್ದತೆಯ ಪ್ರತೀಕವಾಗಿರುವ ಈದ್ ಮಿಲಾದ್ ಹಬ್ಬವನ್ನು ನಗರದಲ್ಲಿ ಮುಸ್ಲಿಮ ಸಮಾಜದ ಬಾಂಧವರು ಸಡಗರ ಸಂಭ್ರಮದಿಂದ ಆಚರಿಸಿದರು.

ನಗರದ ವಿವಿಧೆಡೆ ಹಸಿರು ಧ್ವಜಗಳು, ಬಾವುಟಗಳು ಹಾರಾಡಿದವು. ಮುಸ್ಲಿಮರು ಮೆರವಣಿಗೆಯಲ್ಲಿ ಮಹ್ಮದ ಪೈಗಂಬರ ಅವರ ಕುರಿತ ಗುಣಗಾನ ಮಾಡಿದರು.

ಮಕ್ಕಳು ಬಣ್ಣ, ಬಣ್ಣದ ಉಡುಪು ಧರಿಸಿ ಸಂಭ್ರಮಿಸಿದರು.

ಕಣ್ಣು ಹರಿದಷ್ಟು ದೂರ ಕಾಣುತ್ತಿದ್ದ ಬೃಹತ್ ಮೆರವಣಿಗೆಯಲ್ಲಿ ಹಿರಿಯರು, ಕಿರಿಯರು ಎನ್ನದೆ ಸಂಭ್ರಮ, ಸಡಗರಗಳಿಂದ ಎಲ್ಲರು ಭಾಗವಹಿಸಿದ್ದರು. ಹೆಣ್ಣುಮಕ್ಕಳು ಭಾರತದ ದ್ವಜವನ್ನು ಹಿಡಿದು ಮೆರವಣಿಗೆಯಲ್ಲಿ ಭಾಗಿಯಾಗಿದ್ದು ಎಲ್ಲರ ಗಮನ ಸೆಳೆಯಿತು.

ಮುಂಜಾನೆ 9 ಗಂಟೆಯ ಶಾಹ್ ಆಲ್ಂ ಗೇಟ ಹತ್ತಿರ ಮೆರವಣಿಗೆಗೆ ಮಾಜಿ ಶಾಸಕ ಆನಂದ ನ್ಯಾಮಗೌಡ,ಮೌಲಾನಾ ಅಬುಸಾಲಿಯಾಸಾ,ಮಲಾನಾ ಖುತ್ಬುದಿನ್ನ ಬಿಜಾಪುರ,ಮೌಲಾನಾಶಿಸರ್ಂಗಿ,ಮಾಮೂನರಸೀಧ ಪಾರಥನಳ್ಳಿ,ತೌಫಿಕ್ ಪಾರಥನಳ್ಳಿ,ರಿಯಾಜ ಅವಟಿ,ನಜೀರ ಕಂಗನೋಳ್ಳಿ,ನಗರಸಭೆ ಸದಸ್ಯ ಮುಬಾರಕ ಅಪರಾಧ್,ಮೌಲಾನಾ ಜುನೆದ ರಜಾ,ನಗರ ಯೋಜನೆ ಪ್ರಾಧಿಕಾರ ಅದ್ಯಕ್ಷ ಅನ್ವರ ಮೋಮಿನ, ರಫಿಕ್ ಬಾರಿಗಡ್ಡಿ,ಸುಶಿಲಕುಮಾರ ಬೆಳಗಲಿ,ನ್ಯಾಯವಾದಿ ಶಶಿಕಾಂತ ದೋಡಮನಿ, ಡಿ.ವಾಯ್.ಎಸ್.ಪಿ ಸಯ್ಯದ ರೋಷನ್ ಜಮೀರ,ಸಿಪಿಐ ಮಲ್ಲಪ್ಪ ಮಡ್ಡಿ,ಪಿ.ಎಸ್.ಐ ಅನೀಲ ಕುಂಬಾರ,ಬಕ್ಕರ ಕುಡಚಿ,ಸಾಧೀಕ್ ಬಂಟನೂರ,ಮುಸ್ತಾಕ್ ಝುಂಡೆ ಸೇರಿದಂತೆ ಅನೇಕರು ಮೆರವಣಿಗೆಗೆ ಸಾಥ ನೀಡಿದರು.

ಮೆರವಣಿಗೆಯುದ್ದಕ್ಕೂ ಹಲವು ಸಂಘಸಂಸ್ಥೆಗಳು ಪಾನಕ, ಸಿಹಿ ಹಾಗೂ ಹಣ್ಣುಗಳನ್ನು ವಿತರಣೆ ಮಾಡಿದರು.

ಶಾಹ್‌ಆಲ್ಂಗೇಟದಿಂದಮೆರವಣಿಗೆಪ್ರಾರಂಭವಾಗಿ, ಬಾಗಸೆ ಗಲ್ಲಿ,ಹನುಮಾನ್ ಚೌಕ,ಪೋಸ್ಟ್ ಚೌಕ, ಅಶೋಕ ವೃತ್ತ,ಜೋಳದ ಬಜಾರ್,ಟಿಪ್ಪು ಸುಕ್ತಾನ ವೃತ್ತ ಸೇರಿದಂತೆ ಪ್ರಮುಖ ರಸ್ತೆಯಲ್ಲಿ ಸಂಚರಿಸಿ ಮುಧೋಳ ರಸ್ತೆಯ ಅರ್ಸದ ಮಡಿ ಈದ್ಗಾ ಮೈದಾನದಲ್ಲಿ ಸಮಾರೂಪ ಗೊಂಡಿತ್ತು.

## ಟೈರ್ ಬ್ಲಾಸ್ಟ್ ಹೊತ್ತಿ ಉರಿದ ಲಾರಿ

**ಜಮಖಂಡಿ :** ತಾಲೂಕಿನ ಸಿದ್ದಾಪುರ ಗ್ರಾಮದ ಮುಧೋಳ ಹೆದ್ದಾರಿಯಲ್ಲಿ ಚಲಿಸುತ್ತಿದ್ದ ಸಿಮೆಂಟ ಲಾರಿ ಟ್ಯಾಂಕರ ಟೈರಗಳು ಕಾಯ್ದು ಆಕಸ್ಮಿಕವಾಗಿ ಬೆಂಕಿ ಹತ್ತಿ ಲಾರಿಯ ಮುಂದಿನ ಭಾಗ ಸುಟ್ಟು ಕರಕಲಾಗಿದೆ ಅದೃಷ್ಟವಶಾತ್ ಯಾವುದೇ ಪ್ರಾಣಪಾಯ ಸಂಭವಿಸಿಲ್ಲ ಎಂದು ಮಾಹಿತಿ ತಿಳಿದು ಬಂದಿದೆ.

ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ತಾಲೂಕಿನ ಚಾಲಕ ಜಗದೀಶ ಗುರಪ್ಪ ಪಾಟೀಲ ಸಿಮೆಂಟ ಟ್ಯಾಂಕರ ಲಾರಿಯನ್ನು ಲೋಕಾಪೂರ ಕಡೆಯಿಂದ ಮುಧೋಳ ಹಾಗೂ ಜಮಖಂಡಿ ಮಾರ್ಗವಾಗಿ ಮಹಾರಾಷ್ಟ್ರಕ್ಕೆ ಹೋಗುವ ಸಂಧರ್ಭದಲ್ಲಿ ಸಿದ್ದಾಪೂರ ಗ್ರಾಮದ ರಸ್ತೆ ಮೇಲೆ ಅಕಸ್ಮೀಕವಾಗಿ ಲಾರಿಗೆ ಬೆಂಕಿ ಹೊತ್ತಿ ಕೊಂಡಿದೆ ಎಂದು ತಿಳಿದು ಬಂದಿದೆ.



ಸ್ಥಳಕ್ಕೆ ಅಗ್ನಿಶಾಮಕ ದಳ ಸಿಬ್ಬಂದಿಗಳು ಆಗಮೀಶಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಜಮಖಂಡಿ ಗ್ರಾಮೀಣ ಪೊಲೀಸ ಠಾಣೆ ಪೋಲಿಸರು ಭೇಟಿ ನೀಡಿ, ಪರಿಶೀಲನೆ ನಡೆಸಿ ತನಿಖೆ ಕೈಗೊಂಡಿದ್ದಾರೆ

## ವಿಶ್ವ ಆತ್ಮಹತ್ಯೆ ತಡೆಗಟ್ಟುವಿಕೆ ಸಪ್ತಾಹ ಅಂಗವಾಗಿ ವಿದ್ಯಾರ್ಥಿಗಳಿಗೆ ಜಾಗೃತಿ ಶಿಬಿರ



**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಪಟ್ಟಣದ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜಿನ ಸಭಾಂಗಣದಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವಿಕೆ ಸಪ್ತಾಹ ಅಂಗವಾಗಿ ಮಾನ್ವಿ ಪಟ್ಟಣದ ಆರೋಗ್ಯ ಇಲಾಖೆಯ ನಮ್ಮ ಕ್ಲೀನಿಕ್ ವತಿಯಿಂದ ನಡೆದ ಆತ್ಮಹತ್ಯೆ ತಡೆಗಟ್ಟುವಿಕೆ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ನಮ್ಮ ಕ್ಲೀನಿಕ್ನ ವೈದ್ಯಾಧಿಕಾರಿ ಡಾ, ಪ್ರಜ್ವಲ್ ಮಾತನಾಡಿ ವಿದ್ಯಾರ್ಥಿಗಳಲ್ಲಿ ಮೂಡುವ ನಕಾರಾತ್ಮಕ ಅಂಶಗಳು ಮನಸ್ಸಿನ ಮೇಲೆ ತೀವ್ರವಾದ ಪ್ರಭಾವವನ್ನು ಬೀರುತ್ತವೆ. ಅತ್ಮಹತ್ಯಗೆ ಪ್ರಚೋದನೆ ನೀಡುತ್ತವೆ. ಮಾನಸಿಕ ಖಿನತೆಯನ್ನು ಮೂಡಿಸುತ್ತವೆ ಅದ್ದರಿಂದ ವಿದ್ಯಾರ್ಥಿಗಳು ಸದಾ ತಮ್ಮ ಮನಸ್ಸನ್ನು ಸಕಾರಾತ್ಮಕ ವಿಷಯಗಳ ಕಡೆ ಗಮನವಿರುವಂತೆ ನೋಡಿ ಕೊಳ್ಳಬೇಕು. ಮಾನಸಿಕವಾಗಿ ಚೈತನ್ಯವನ್ನು ಸದಾ ಜಾಗೃತ ಗೊಳಿಸುವ ಜೀವನ ಶೈಲಿಯನ್ನು ರೂಡಿಸಿ ಕೊಳ್ಳಬೇಕು ಎಂದು ತಿಳಿಸಿದರು.

**ಪಟ್ಟಣದ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜಿನ ಸಭಾಂಗಣದಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವಿಕೆ ಸಪ್ತಾಹ ಅಂಗವಾಗಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಭಿತ್ತಿ ಪತ್ರಗಳ ಪ್ರದರ್ಶನವನ್ನು ನಮ್ಮ ಕ್ಲೀನಿಕ್ನ ವೈದ್ಯಾಧಿಕಾರಿ ಡಾ. ಪ್ರಜ್ವಲ್ ಮಾಡಿದರು.**

ಯೋಗ ಗುರುಗಳಾದ ಅನ್ನದಾನಯ್ಯ ಸ್ವಾಮಿ ಮಾತನಾಡಿ ವಿದ್ಯಾರ್ಥಿಗಳು ಪ್ರತಿ ದಿನ ನಿಯಮಿತವಾಗಿ ಸ್ವಲ್ಪ ಸಮಯ ಸರಳವಾದ ಯೋಗ ಅಭ್ಯಾಸಗಳು, ಸೂರ್ಯ ನಮಸ್ಕಾರ, ಧ್ಯಾನ, ಪ್ರಾಣಾಯಾಮಗಳನ್ನು ನಿತ್ಯವೂ ಮಾಡುತ್ತಾ ಬಂದಲ್ಲಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಸಧೃಡ ರಾಗುವುದಕ್ಕೆ ಸಾಧ್ಯವಿದೆ ಹಾಗೂ ನಿಮ್ಮ ಮನಸ್ಸು ನಕಾರತ್ಮಕತೆ ಯಿಂದ ಸಕಾರಾತ್ಮಕವಾಗಿ ನಿಮ್ಮ ಮನಸ್ಸು ಬದಲಾಗಿ ಚೈತನ್ಯ ದಿಂದ ಕೂಡಿರುತ್ತದೆ ಎಂದು ತಿಳಿಸಿದರು.

ಕಾಲೇಜಿನವಿದ್ಯಾರ್ಥಿಗಳಿಗೆಸರಳವಾದಯೋಗದಆಸನಗಳ ಬಗ್ಗೆ ತಿಳಿಸಿ ಕೊಡಲಾಯಿತು. ಕಾಲೇಜಿನ ಪ್ರಾಚಾರ್ಯರಾದ ನಾಗಮಲ್ಲೇಶ್. ಮಾನ್ವಿ ನಮ್ಮ ಕ್ಲಿನಿಕ್ಕಿನ ಪ್ರಯೋಗ ಶಾಲಾ ತಜ್ಞರಾದ ಕೃಷ್ಣಮೂರ್ತಿ. ಉಪನ್ಯಾಸಕರಾದ ಅನುಪಮ. ಬಸವರಾಜ್. ಅಯ್ಯಪ್ಪ ಸೇರಿದಂತೆ ಕಾಲೇಜಿನ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾನಕ್ಕುಂದಿ.ಮಾನ್ವಿ**

## 10 ಲಕ್ಷ ಮೌಲ್ಯದ 22 ಬೈಕ್ ಕದ್ದಿದ್ದ ಕಳ್ಳನ ಬಂಧಿಸಿದ ಜಮಖಂಡಿ ಪೊಲೀಸರು

**ಜಮಖಂಡಿ :** ತಾಲೂಕಿನ ಸುತ್ತಮುತ್ತಲಿನ ಕಳ್ಳತನ ವಾಗಿದ್ದ 22 ಬೈಕ್ ಗಳನ್ನ ಪತ್ತೆ ಮಾಡುವಲ್ಲಿ ಜಮಖಂಡಿ ಪೊಲೀಸರು ಯಶಸ್ವಿಯಾಗಿದ್ದಾರೆ.ಜಮಖಂಡಿ ಶಹರ್ ಹಾಗೂ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನ ವಾಗಿದ್ದ ಅಂದಾಜು ಹತ್ತು ಲಕ್ಷ ಮೌಲ್ಯದ ವಿವಿಧ ಕಂಪನಿಗಳ 22 ಬೈಕಗಳನ್ನ ಪತ್ತೆ ಮಾಡಿದ್ದಾರೆ.ಇನ್ನು ಕಳ್ಳತನ ಮಾಡಿದ್ದ ಜಮಖಂಡಿ ತಾಲೂಕಿನ ಇನಾಂ ಹಂಚಿನಾಳ ಗ್ರಾಮದ ಕಳ್ಳ ಸಿದ್ದಪ್ಪ ಉಪ್ಪಲದಿನ್ನಿಯನ್ನ ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ನೀಡಿದ್ದಾರೆ.

ಕಳೆದ ಜೂನ್ 9.ರಂದು ಜಮಖಂಡಿ ನಗರದ ಕೋಷ್ಠಿ ಗಲ್ಲಿಯಲ್ಲಿ ಅಪ್ಪಾಸಾಹೇಬ್ ಬಿರಾದಾರ ಎನ್ನುವವರ ಬೈಕ್



ಕಳ್ಳತನವಾಗಿತ್ತು.ಅವರು ಈ ಕುರಿತು ಶಹರ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಪ್ರಕರಣದ ಬೆನ್ನತ್ತಿದ ಪೊಲೀಸರು ಜಮಖಂಡಿ

ಶಹರ್ ಹಾಗೂ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನವಾಗಿದ್ದ 22 ಬೈಕಗಳನ್ನ ಪತ್ತೆ ಮಾಡಿ ಆರೋಪಿಯನ್ನ ಬಂಧಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಹೆಚ್ಚುವರಿ ಜಿಲ್ಲಾ ವರಿಷ್ಠಾಧಿಕಾರಿ ಮಹಾಂತೇಶ್ವರ ಜಿದ್ದಿ ಡಿ.ವಾಯ್.ಎಸ್.ಪಿ ಸಯ್ಯದ ರೋಷನ್ ಜಮೀರ್,ಮಾರ್ಗದರ್ಶನದಲ್ಲಿ ಸಿಪಿಐ ಮಲ್ಲಪ್ಪ ಡಿ ಮಡ್ಡಿ,ನೇತೃತ್ವದಲ್ಲಿ ಪಿ.ಎಸ್.ಐ ಅನಿಲ್ ಕುಂಬಾರ.ಅಪರಾದ ವಿಭಾಗದ ಪಿ.ಎಸ್.ಐ ಎನ್. ಕೆ. ಕಾಜಗಾರ, ಪಿ.ಎಸ್.ಐ,ಸಿಬ್ಬಂದಿಗಳಾದ ಸಿದ್ದು ಕಲಾತೆ,ಮುತ್ತಪ್ಪ ಮಾಂಗ,ಪ್ರಕಾಶ ಹೊಸಮನಿ,ಸಂಗಪ್ಪ ಕೋಟಿ. ಪರಶುರಾಮ ಘಾಟಗೆ. ಮಲ್ಲಿಕಾರ್ಜುನ ತಂಬಾಕದ,ನಾಗರಾಜ ಬಿಸಲದಿನ್ನಿ,ಶಂಕರ ಆಸಂಗಿ,ಆಯ್. ಎಮ್. ಪೆಂಡಾರಿ, ರಾಜಶೇಖರ ಮನಗೂಳಿರವರನ್ನೊಳ್ಳಗೊಂಡ ತಂಡ ರಚನೆ ಮಾಡಿ,ಕಾರ್ಯಾಚರಣೆ ಕೈಗೊಂಡು ಜಮಖಂಡಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.

# 884 ಕೆ.ಜಿ ಪಡಿತರ ಅಕ್ಕಿ ವಶ



**ಇಂಡಿ :** ತಾಲ್ಲೂಕಿನ ಹಿರೇಬೇವನೂರ ತಾಂಡಾ ಕ್ರಾಸ್ ಬಳಿ ಆಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಪಡಿತರ ಅಕ್ಕಿಯನ್ನು ಸಾಗಾಟ ಮಾಡುವಾಗ ಪೊಲೀಸರು ಮತ್ತು ಆಹಾರ ನಿರೀಕ್ಷಕರು ಜಂಟಿಯಾಗಿ ದಾಳಿ ಮಾಡಿ ವಶಪಡಿಸಿಕೊಂಡಿದ್ದಾರೆ.

ಸೋಲಾಪುರದ ನಿವಾಸಿ ಫಿರೋಜ ನೂರವಾಲೆ ಮತ್ತು ಸಂಜೀವಕುಮಾರ ಟೆಂಗಳೆ ಆರೋಪಿಗಳು ಎಂದು ತಿಳಿದುಬಂದಿದೆ.

ಟಂ ಟಂ ಗೂಡ್ಸ್ ನಲ್ಲಿ ನಾಲ್ಕು ಕೆಜಿ ಸ್ಯಾಂಪಲ್ ಅಕ್ಕಿ ಮತ್ತು 880 ಕೆಜಿ ಅಕ್ಕಿ ಸೇರಿದಂತೆ 60,636 ಮೌಲ್ಯದ ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಇಂಡಿ ಗ್ರಾಮೀಣ ಠಾಣೆಯ ಪಿ.ಎಸ್.ಐ ಸೋಮೇಶ ಗೆಜ್ಜಿ ನೇತೃತ್ವದಲ್ಲಿ ದಾಳಿ ಮಾಡಲಾಗಿದೆ. ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಾಗಮೋಹನದಾಸ ವರದಿಯಲ್ಲಿ ಸ್ಪರ್ಶ,ಅಸ್ಪೃಶ್ಯ ಪದ ತೆಗೆಯಲು ಆಗ್ರಹ

**ಇಂಡಿ :** ನ್ಯಾಯಮೂರ್ತಿ ನಾಗಮೋಹನದಾಸ ವರದಿಯಲ್ಲಿ ಉಲ್ಲೇಖಿಸಿರುವ ಸ್ಪರ್ಶ ಹಾಗೂ ಅಸ್ಪೃಶ್ಯ ಪದಗಳನ್ನು ತಕ್ಷಣ ತೆಗೆಯುವುವಂತೆ ಆಲ್ ಇಂಡಿಯಾ ಬಂಜಾರ ಸಂಘದ ಆಗ್ರಹಿಸಿದೆ.

ನ್ಯಾಯಮೂರ್ತಿ ನಾಗಮೋಹನದಾಸ ಆಯೋಗದ ವರದಿಯಲ್ಲಿ ಲಂಬಾಣಿ, ಕೊರಚಾ, ಕೊರಮ, ಭೋವಿ, ಅಲೆಮಾರಿ ಅಥವಾ ಅರೆ ಅಲೆಮಾರಿ ಸಮುದಾಯದವರಿಗೆ ಸ್ಪರ್ಶ ಸಮುದಾಯಗಳೆಂದು ಪ್ರವರ್ಗ ಎ, ಮತ್ತು ಬಿ ಸಮುದಾಯದವರನ್ನು ಅಸ್ಪೃಶ್ಯ ಸಮುದಾಯದವರುಎಂದುಅಸಂವಿಧಾನಿಕ ಹಾಗೂ ಕಾನೂನು ವಿರೋಧಿ ಪದಗಳನ್ನು ಈ ವರದಿಯಲ್ಲಿ ಉಪಯೋಗಿಸಿರುವುದಕ್ಕೆ ತೀವ್ರವಿರೋಧವಿದೆ ಎಂದು ಸಂಘ ಹೇಳಿದೆ.

ಈ ಕುರಿತು ತಾಲೂಕು ಆಡಳಿತ ಮೂಲಕ ಮುಖ್ಯ ಮಂತ್ರಿ ಸಿದ್ದರಾಮಯ್ಯಗೆ ಮನವಿ ಸಲ್ಲಿಸಿದ ಸಂಘವು ಲಂಬಾಣಿ, ಕೊರಚಾ, ಕೊರಮ, ಭೋವಿ, ಅಲೆಮಾರಿ ಅಥವಾ ಅರೆ ಅಲೆಮಾರಿ ಸಮುದಾಯದವರಿಗೆ ವಿಮುಕ್ತ ಸಮುದಾಯಗಳು ಎಂದು ಮಾರ್ಪಡಿಸಿ




ದಾಖಲೀಕರಿಸಬೇಕಾಗಿ ಮನವಿ ಮಾಡಿದೆ.

ಭಾರತದ ಸಂವಿಧಾನವು, ವಿಧಿ 17 ರ ಮೂಲಕ, ಅಸ್ಪೃಶ್ಯತೆಯನ್ನು ಮತ್ತು ಅದರ ಎಲ್ಲಾ ರೂಪಗಳಲ್ಲಿ ರದ್ದುಗೊಳಿದೆ. ಇದು ಕಾನೂನುಬಾಹಿರ ಮಾತ್ರವಲ್ಲದೆ ಶಿಕ್ಷಾರ್ಹ ಎಂದು ಘೋಷಿಸಿದೆ. ಅಧಿಕೃತ ಆಯೋಗಗಳು ಈ ಪರಿಭಾಷೆಯನ್ನು ಪುನರುಜ್ಜೀವನಗೊಳಿಸುವುದು ಸಾಂವಿಧಾನಿಕ ಆದೇಶಕ್ಕೆ ವಿರುದ್ಧವಾಗಿದೆ.

ಕರ್ನಾಟಕರಾಜ್ಯವಿರುದ್ಧಅಪ್ಪಬಾಲುಇಂಗಳೆ (1995) ಪ್ರಕರಣದಲ್ಲಿ, ಸ್ವತಂತ್ರ ಭಾರತದಲ್ಲಿ ಅಸ್ಪೃಶ್ಯತೆಗೆ ಸ್ಥಾನವಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಮೀಸಲಾತಿಗಳ ಉಪ–ವರ್ಗೀಕರಣದ ನೆಪದಲ್ಲಿಯೂ ಸಹ, ಅಂತಹ ಅಸಂವಿಧಾನಿಕ ವರ್ಗಗಳನ್ನು ಮರುಪರಿಚಯಿಸುವ ಅಧಿಕಾರ ಯಾವುದೇ ಆಯೋಗ ಅಥವಾ ರಾಜ್ಯ ಸಂಸ್ಥೆಗೆ ಇಲ್ಲ.

"ಸ್ಪಶ್ಯ ಮತ್ತು "ಅಸ್ಪೃಶ್ಯ" ಈ ಪದಗಳನ್ನು ಮತ್ತೆ ಬಳಸಲು ಪ್ರಾರಂಭಿಸಿದರೆ, ಅದೇ ಅನ್ಯಾಯವನ್ನು ಹೊಸ ರೂಪದಲ್ಲಿ ಪುನರಾವರ್ತಿಸುವುದಾಗಿದೆ.

ಅದರಲ್ಲೂ, ಅಧಿಕೃತ ವರದಿಗಳಲ್ಲಿ ಬಳಸಿದಾಗ, ಅವು ತಾರತಮ್ಯವನ್ನು ಕಾನೂನುಬದ್ಧಗೊಳಿಸುವ, ಪರಿಶಿಷ್ಟ ಜಾತಿಗಳಲ್ಲಿ ಹೊಸ ಶ್ರೇಣಿಗಳನ್ನು ಸೃಷ್ಟಿಸುವ ಮತ್ತು ಬಂಜಾರ ಮತ್ತು ಭೋವಿಯಂತಹ ಇನ್ನಿತರ ಸಮುದಾಯಗಳ ಪರಿಶಿಷ್ಟ ಜಾತಿ ಸ್ಥಾನಮಾನವನ್ನು ಪ್ರಶ್ನಿಸುವ ಪ್ರಯತ್ನಗಳಂತಹ ವಿಭಜಕ ಕಾರ್ಯಸೂಚಿಗಳಿಗೆದಾರಿ ಮಾಡಿಕೊಡುವ ಅಪಾಯವನ್ನುಂಟುಮಾಡುತ್ತವೆ.

ಇಂಥ ನಡೆ ದಲಿತರನ್ನು ವಿಭಜಿಸುವುದು ಮತ್ತು ಅವರಿಗೆ ದೊರೆಯುವ ಪ್ರಯೋಜನಗಳನ್ನು ನಿಯಂತ್ರಿಸುವ ಮೂಲಕ ಅವರನ್ನು ಮತ್ತೆ ಅಧಃಪತನಕ್ಕೆ ತಳ್ಳಲು ಒಂದು ರಾಜಕೀಯ ಆಟವಾಗಿದೆ ಮೂಲಭೂತವಾಗಿ, ಈ ಸಮುದಾಯಗಳ ಸೇರ್ಪಡೆಯು ಆಕಸ್ಮಿಕವಲ್ಲ.

ಈ ಮೊದಲು ಮಿಲ್ಲರ್ ಆಯೋಗದಿಂದ, ನಂತರ ಬ್ರಿಟಿಷ್ ಕಾನೂನಿನಿಂದ ಮತ್ತು ಅಂತಿಮವಾಗಿ ಭಾರತದ ಸಂವಿಧಾನದಿಂದ ಈ ಸಮುದಾಯಗಳು ಸಾಂವಿಧಾನಿಕ ರಕ್ಷಣೆಗೆಅಗತ್ಯವಿರುವಎಲ್ಲಮಾನದಂಡಗಳ ಪರಧಿಯೊಳಗೆ ಒಳಗೊಂಡಿವೆ ಎಂಬುದು ಸ್ಪಷ್ಟವಾಗಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ

# ಸಿಂದಗಿ ನಗರಸಭೆಯಾಗಿ ಮೇಲ್ದರ್ಜೆಗೆ; ವಿಜಯೋತ್ಸವ



**ಸಿಂದಗಿ :** ಪಟ್ಟಣದ ಪುರಸಭೆ ನಗರಸಭೆಯಾಗಿ ಮೇಲ್ದರ್ಜೆಗೇರಿದ ಹಿನ್ನೆಲೆಯಲ್ಲಿ ಪುರಸಭೆ ಆಡಳಿತ ಮಂಡಳಿ ಸದಸ್ಯರು, ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಸಂಜೆ ಬಸವೇಶ್ವರ ವೃತ್ತದಲ್ಲಿ ವಿಜಯೋತ್ಸವ ಆಚರಿಸಿದರು.

ಪುರಸಭೆ ಅಧ್ಯಕ್ಷ,ಉಪಾಧ್ಯಕ್ಷ,ಸದಸ್ಯರು ಹಾಗೂ ಬ್ಲಾಕ್ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳು ಪರಸ್ಪರ ಗುಲಾಲು ಎರಚಿ ಪಟಾಕಿ ಸಿಡಿಸುವ ಮೂಲಕ ಸಂಭ್ರಮಪಟ್ಟರು.

ಪುರಸಭೆ ಅಧ್ಯಕ್ಷ ಡಾ.ಶಾಂತವೀರ ಮನಗೂಳಿ ಹಾಗೂ ಉಪಾಧ್ಯಕ್ಷ ಸಂದೀಪ ಚೌರ ಡೊಳ್ಳು ಬಾರಿಸುತ್ತ ಸಂಭ್ರಮಿಸಿದರು. ಕಾರ್ಯಕರ್ತರು ಶಾಂತವೀರ ಮನಗೂಳಿಯವರನ್ನು ಮೇಲೆತ್ತಿಕೊಂಡು ಕುಣಿದು ಕುಪ್ಪಳಿಸಿದರು.

ಪುರಸಭೆಸ್ಥಾಯಿಸಮಿತಿಅಧ್ಯಕ್ಷಶ್ರೀಶೈಲಬೀರಗೊಂಡ, ಸದಸ್ಯರಾದ ಬಸವರಾಜ ಯರನಾಳ, ಚನ್ನಪ್ಪ ಗೋಣಿ, ಸದಾಶಿವ ಕುಂಬಾರ, ಸಿದ್ದು ಮಲ್ಲೇದ, ರಹೀಂ ದುದನಿ, ಶರಣಪ್ಪ ಸುಲ್ಪಿ ಹಾಗೂ ಭೀಮೂ ರೋಡಗಿ, ಶಾಂತು ರಾಣಾಗೋಳ, ಪ್ರತಿಭಾ ಚಳ್ಳಗಿ ಮತ್ತು ಅಪಾರ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವದಲ್ಲಿ ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ರಾಜಶೇಖರ ಎಸ್, ಆರೋಗ್ಯ ನಿರೀಕ್ಷಕ ನಬಿರಸೂಲ ಉಸ್ತಾದ ಅವರು ಶಾಂತವೀರ ಮನಗೂಳಿಯವರನ್ನು ಸನ್ಮಾನಿಸಿದರು.

# ಉದ್ಯಾನ ನಿರ್ವಹಣೆ, ರಸ್ತೆ ನಿರ್ಮಾಣಕ್ಕೆ ಆಗ್ರಹ; ಪುರಸಭೆ ಕಚೇರಿಗೆ ಮುತ್ತಿಗೆ

**ಮುದ್ದೇಬಿಹಾಳ:** ಎರಡು ವರ್ಷಗಳಿಂದ ಮಾರುತಿ ನಗರದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ಆಗಿಲ್ಲ. ಮೂಲ ಸೌಕರ್ಯ ಕಲ್ಪಿಸಬೇಕಾಗಿದ್ದ ಪುರಸಭೆ ಆಡಳಿತ ಉದಾಸೀನ ತೋರುತ್ತಿರುವುದರಿಂದ ನಿವಾಸಿಗಳು ತೊಂದರೆ ಅನುಭವಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಪಟ್ಟಣದ ಮಾರುತಿ ನಗರದ ನಿವಾಸಿಗಳು ಗುರುವಾರ ಇಲ್ಲಿನ ಪುರಸಭೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ಮಾಡಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಯುವ ಮುಖಂಡ ಆನಂದ ತುಪ್ಪದ, ಮೂರು ವರ್ಷಗಳ ಹಿಂದೆ ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಅವರಿದ್ದಾಗ ಅಗೆದು ಬಿಟ್ಟಿರುವ ರಸ್ತೆಗಳನ್ನು ರಿಪೇರಿ ಮಾಡದೇ ಇರುವುದರಿಂದ ಗುಡ್ಡಗಾಡಿನಲ್ಲಿ ಸಂಚರಿಸುವ ಅನುಭವ ನಿವಾಸಿಗಳಿಗಾಗುತ್ತಿದೆ.



ಉದ್ಯಾನವನವಂತೂ ತಿಪ್ಪೆಗುಂಡಿಯಾಗಿದೆ.

ರಸ್ತೆಗಳು ಹದಗೆಟ್ಟಿದ್ದರೂ ಆಡಳಿತ ನಡೆಸುವವರು ಕಣ್ಣು ಮುಚ್ಚಿಕೊಂಡು ಕೂತಿದ್ದಾರೆ ಎಂದು ದೂರಿದರು.

ಮಾರುತಿ ನಗರದ ನಿವಾಸಿಗಳು ಮೂಲ ಸೌಕರ್ಯ ಕುರಿತು ಜಿಲ್ಲಾಧಿಕಾರಿಗಳು, ಮುಖ್ಯಾಧಿಕಾರಿಗಳು,ಹಾಲಿ ಶಾಸಕರ ಮನೆಗೆ ಹೋಗಿ ಅಳಲು ತೋಡಿಕೊಂಡರೂ ಏನೂ ಪ್ರಯೋಜನವಾಗಿಲ್ಲ ಎಂದು ದೂರಿದರು.

'ನಮ್ಮ ವಾರ್ಡಗೆ ಸೌಕರ್ಯ ಕಲ್ಪಿಸುವುದಿಲ್ಲ ಎಂದಾದರೆ ತೆರಿಗೆ ವಸೂಲಿ ಮಾಡಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿವಾಸಿ ಪಿ.ಎನ್.ಕುಲಕರ್ಣಿ ಮಾತನಾಡಿ, ಪುರಸಭೆಯವರು ಕಾಲಕಾಲಕ್ಕೆ ಚರಂಡಿ ಸ್ವಚ್ಛತೆ ಮಾಡುವುದಿಲ್ಲ.

ಜನರು ರಾತ್ರಿ ಸಮಯದಲ್ಲಿ ಕತ್ತಲೆಯಲ್ಲಿ ಸಂಚರಿಸಬೇಕಾಗುತ್ತಿದ್ದು ಸರಿಯಾಗಿ ಬೀದಿ ದೀಪಗಳು ಇಲ್ಲ ಎಂದು ಆರೋಪಿಸಿದರು. ಒಂದು ವಾರದಲ್ಲಿ ಸಮಸ್ಯೆಗಳು ಸರಿಪಡಿಸದಿದ್ದರೆ ಪುರಸಭೆಗೆ ಬೀಗ ಜಡಿದು ಸತ್ಯಾಗ್ರಹ ನಡೆಸಬೇಕಾಗುತ್ತದೆ ಎಂದರು.

ಪ್ರತಿಭಟನೆ ಸುದ್ದಿ ತಿಳಿದು ಆಗಮಿಸಿದ ಪುರಸಭೆ ಅಧ್ಯಕ್ಷ ಮಹೆಬೂಬ ಗೊಳಸಂಗಿ, ಹದಿನೈದು ದಿನಗಳಲ್ಲಿ ಮಾರುತಿ ನಗರದ ಸಮಸ್ಯೆಗಳಿಗೆ ಸ್ಪಂದಿಸುವುದಾಗಿ ಹೇಳಿದರು.

ಕಚೇರಿ ವ್ಯವಸ್ಥಾಪಕ ಎಚ್.ಎ.ಡಾಲಾಯತ್ ಮನವಿ ಸ್ವೀಕರಿಸಿದರು. ನಿವಾಸಿಗಳಾದ ಎಂ.ಬಿ.ಬಿಳೇಭಾವಿ, ಮುನ್ನಾ ಅತ್ತಾರ, ಎಂ.ಎಂ. ಡಮನಿ, ಎಂ.ಎಸ್. ಮಾಲಗತ್ತಿ, ಬಿ.ಎಸ್.ದಾಸರ, ಎಂ.ಎಂ.ಸುಂಬಡ, ಬಿ.ಎಸ್. ಅಂಗಡಿ,ಎಂ.ಎಂ.ಉಪನಾಳ, ಆರ್.ಬಿ.ಹುನ್ನೂರ, ಎನ್. ಎನ್.ಖಾನ, ಕೆ.ಎ.ಹಿರೇಮಠ, ಸುರೇಶ ಕಮತ, ಮನೋಹರ ಪತ್ತಾರ, ಬಸವರಾಜ ಅಂಬಿಗೇರ, ಶಿವಾನಂದ ಚಿನಿವಾರ, ಎಂ.ಡಿ.ಮೋಮಿನ, ಉಮೇಶ ಜತ್ತಿ, ಬಸವರಾಜ ಮರೋಳ ಮೊದಲಾದವರು ಇದ್ದರು.

# ರೈತ ಕುಟುಂಬದ ಮಕ್ಕಳೇ ಹೆಚ್ಚಾಗಿ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ: ನಾಗರಾಜ ಗಡಾದ

**ಹಳ್ಳೂರ :** ರೈತ ಕುಟುಂಬದ ಮಕ್ಕಳೇ ಹೆಚ್ಚಾಗಿ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ತಂದೆ,ತಾಯಿ ಮಕ್ಕಳಿಗೆ ಒಳ್ಳೆಯ ಸಂಸ್ಕಾರ , ಸಂಯಮ ಶಿಸ್ತು ನೀಡಿದರೆ ಶಿಕ್ಷಕರು ಜ್ಞಾನದ ಬೆಳಕನ್ನು ನೀಡುವ ಕಾರ್ಯವನ್ನು ಮಾಡಿದರೆ ವಿದ್ಯಾರ್ಥಿಗಳ ಬಾಳು ಬಂಗಾರವಾಗುತ್ತದೆಂದು ಶಿಕ್ಷಣ ಸಂಯೋಜಕರಾದ ನಾಗರಾಜ ಗಡಾದ ಹೇಳಿದರು.

ಅವರು ಗ್ರಾಮದ ಶ್ರೀ ಸೌಭಾಗ್ಯವತಿ ಸುಮಿತ್ರಾ ದೇವಿ ಪಾಟೀಲ ಪ್ರಾಥ–ಮಿಕ ಮತ್ತು ಪ್ರೌಢ ಶಾಲೆಯ ಆವರಣದಲ್ಲಿ ನಡೆದ ಪಾಲಕರ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ ಪಾಲಕರು ಮಕ್ಕಳಿಗೆ ಅನಾವಶ್ಯಕ ಹಣ ನೀಡಬೇಡಿರಿ. ದುಡಿಮೆ,ಕಷ್ಟದ ಬಗ್ಗೆ ಅರಿವು ಮೂಡಿಸುವ ಕಾರ್ಯ ನಿರ್ವಹಿಸಬೇಕು. ಪಾಲಕ ಶಿಕ್ಷಕರು ಮಕ್ಕಳಿಗೆಒತ್ತಡಹಾಕದೆಸರಳವಾದ ವಿಧಾನವು ಒಳ್ಳೆಯದು. ಮಕ್ಕಳಿಗೇ ಶಿಕ್ಷಣ ನೀಡುವಲ್ಲಿ ಶಿಕ್ಷಕ, ಪಾಲಕರ ಪಾತ್ರ ಬಹಳ ದೊಡ್ಡದು.ಶಿಕ್ಷಕ, ವಿದ್ಯಾರ್ಥಿಗಳು ಸರಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಶಿಕ್ಷಕರು ಶಾಲೆಗೆ ಸರಿಯಾದ ಸಮಯಕ್ಕೆ ಬಂದು ಗುಣಮಟ್ಟದ ಶಿಕ್ಷಣವನ್ನು ದಾರೆ



ಎರೆಯಬೇಕೆಂದು ಹೇಳಿದರು.

ಸಮಾಜ ಸೇವಕ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮುರಿಗೆಪ್ಪ ಮಾಲಗಾರ ಅವರು ಆತಿಥಿಯಾಗಿ ಆಗಮಿಸಿ ಮಾತನಾಡಿ ಸರಕಾರವು ಪಾಲಕರ ಸಭೆ ಮಾಡಲು ನಿರ್ಧರಿಸಿದ್ದು ಹೆಮ್ಮಯ ಸಂಗತಿ ಮಕ್ಕಳು ಉತ್ತಮವಾದ ಶಿಕ್ಷಣ ಕಲಿಯಲು ಉತ್ತೇಜನ ನೀಡಿದಂತಾಗಿದೆ. ಪ್ರತಿ ತಿಂಗಳು ಪಾಲಕರ ಸಭೆ ನಡೆಸಬೇಕು, ತಾಯಿ ತಂದೆಯರು ಕೆಲಸ ಕಾರ್ಯ ಬಿಟ್ಟು ಸಭೆಗೆ ಹಾಜರಾದರೆ ಮಕ್ಕಳ ಭವಿಷ್ಯಕ್ಕೆ ದಾರಿ ಮಾಡಿ ಕೊಟ್ಟಂತಾಗುತ್ತದೆ. ತಾಯಿ ತಂದೆ ಮಕ್ಕಳಿಗೆ ಜನ್ಮ ನೀಡಿದರೆ ಸಾಲದು ಮಕ್ಕಳ ಮೇಲೆ ನಿಗಾ ಇಟ್ಟು ಕೆಟ್ಟ ಮಾರ್ಗ ಹಿಡಿಸದೆ ಒಳ್ಳೆಯ ಆಚಾರ ವಿಚಾರಗಳ ಬಗ್ಗೆ ಅರಿವು ಮೂಡಿಸಿ ಸನ್ಮಾರ್ಗ ತೋರಿದರೆ ಉನ್ನತ ಸ್ಥಾನ ಪಡೆದು ತಂದೆ ತಾಯಿ ಕಲಿತ ಶಾಲೆಗೆ ಮಕ್ಕಳು ಕೀರ್ತಿ ತರುವಂತವರಾಗುತ್ತಾರೆಂದು ಹೇಳಿದರು.

ಭುದಾನಿಗಳಗಾದ ಭಿಮಗೌಡ ಪಾಟಿಲ ಮಾತನಾಡಿ ಮಕ್ಕಳಿಗೆ ಮೊಬೈಲ ವಿಷಕಾರಿಯಿದ್ದಂತೆ ಮೋಬೈಲ್ ಬಳಸುವ ವಿದ್ಯಾರ್ಥಿಗಳ ಸಮಯ ಬುದ್ಧಿ ,ಮಟ್ಟಹಾಳಾಗಿ ಶಿಕ್ಷಣ ಪಡೆಯುವ ಸಾಮರ್ಥ್ಯ ಕುಂಠಿತವಾಗಲು ಮೂಲ ಕಾರಣವಾಗಿ ದೆಂದು ಹೇಳಿದರು.

ಪ್ರೌಡ ಶಾಲೆಯ ಪ್ರದಾನ ಗುರುಗಳಾದ ಎಂ ಡಿ ಕ ುಂಬಾರ. ಪಾಲಕರಾದ ಲಕ್ಷ್ಮಣ ಸುಣದೋಳಿ.ಶ್ರೀಶೈಲ ಹಳ್ಳೂರ.ಭರಮಣ್ಣ ಉದ್ದಪ್ಪಗೋಳ ಪ್ರಸ್ತಾವಿಕವಾಗಿ ಮಾತನಾಡಿದರು.

ಆಡಳಿತ ಮಂಡಳಿ ಅಧ್ಯಕ್ಷ ಮಾರುತಿ ಚನ್ನದಾಸರ, ಶಿಕ್ಷಕಿಂ–ಯರಾದ ಎಂ ಎಂ ನೇಸುರ. ಎಂ ಆರ್ ಬಂಡಿ.ಪ್ರಮೀಳಾ ಸಂಕಾನಟ್ಟಿ ಸೇರಿದಂತೆ ಸರ್ವ ಸದಸ್ಯರು,ನೂರಾರು ಜನ ಪಾಲಕರು, ತಾಯಂದಿರು ,ಶಾಲೆಯ ಸಿಬ್ಬಂದಿಗಳು, ವಿದ್ಯಾರ್ಥಿಗಳಿದ್ದರು .

ಕಾರ್ಯಕ್ರಮವನ್ನು ಪ್ರಕಾಶ ಶಿವಾಪೂರ ಸ್ವಾಗತಿಸಿ. ಅಶೋಕ ಹೆಗ್ಗಾನಿ ನಿರೂಪಿಸಿ. ಪ್ರಾಥಮಿಕ ಶಾಲೆಯ ಪ್ರಗು ಜೆ ಜೆ ಈಡನ್ನವರ ವಂದಿಸಿದರು.

# ಮೋದಿ ಸರಕಾರದ ದಸರಾ, ದೀಪಾವಳಿ ಉಡುಗೊರೆ: ಜಿಲ್ಲಾ ಬಿಜೆಪಿಯಿಂದ ಸ್ವಾಗತ

**ಬಾಗಲಕೋಟೆ :** ಕೇಂದ್ರ ಸರಕಾರ ದಸರಾ ,ದೀಪಾವಳಿ ಹಬ್ಬದ ಸಂದರ್ಭದಲ್ಲಿ ಉಡುಗೊರೆಯಾಗಿ ದೇಶದ ಜನಸಾಮಾನ್ಯರಿಗೆ ಜಿ ಎಸ್ ಟಿ ದರಗಳ ಭಾರಿ ಇಳಿಕೆ ಹಾಗು ನಾಲ್ಕು ತರಹದ ತೆರಿಗೆಯಿಂದ ಕೇವಲ ಎರಡು ಹಂತದ ತೆರಿಗೆ ಸರಳೀಕರಣ ಗೊಳಿಸಿದ ಕೇಂದ್ರ ಹಾಗೂ ಜಿ ಎಸ್ ಟಿ ಮಂಡಳಿಯ ಕ್ರಮವನ್ನು ವಿಶೇಷವಾಗಿ ಸನ್ಮಾನ್ಯ ಮೋದಿಜಿಯವರ ಜನಪರ ಕಳಕಳಿಯನ್ನು ಭಾರತೀಯ ಜನತಾ ಪಾರ್ಟಿ ಜಿಲ್ಲಾ ಘಟಕ ಸಹರ್ಷದಿಂದ ಸ್ವಾಗತಿಸುವದರೊಂದಿಗೆ ಪ್ರಧಾನಿಗಳಿಗೆ ಧನ್ಯವಾದ ಸಮರ್ಪಿಸಿದೆ .ಸ್ವಾತಂತ್ರ್ಯ ದಿನದಂದು ಜಿ ಎಸ್ ಟಿ ವಿಚಾರವಾಗಿ ಭರವಸೆಯ ಮಾತನಾಡಿದ್ದ ಮೋದಿಯವರು ಅದನ್ನು ಜಾರಿಮಾಡಿ ಸ್ತುತ್ಯ ಕಾರ್ಯ ಮಾಡಿದ್ದಾರೆ .

ಏನು ರಾಜ್ಯದಲ್ಲಿನ ಪ್ರಸ್ತುತ ಆಡಳಿತ ಕಾಂಗ್ರೆಸ್ ಸರಕಾರದಿಂದ ಸತತ ಬೆಲೆ ಏರಿಕೆಯಿಂದ ಬಸವಳಿದಿದ್ದ ರಾಜ್ಯದ ಜನತೆ ಕೇಂದ್ರ ಕ್ರಮದಿಂದ ನಿಟ್ಟುಸಿರು ಬಿಡುವಂತಾಗಿದೆ .ಜಿ ಎಸ್ ಟಿ ಇಳಿಕೆಯಿಂದ ಶ್ರೀಸಾಮಾನ್ಯನಿಗೆ ,ರೈತರಿಗೆ, ಆರೋಗ್ಯಕ್ಷೇತ್ರ ಸೇರಿ ಸಮಾಜದ ಎಲ್ಲ ವರ್ಗದ ಜನತೆ ಹರ್ಷಿತರಾಗಿದ್ದಾರೆ .

ಈ ದರ ಇಳಿಕೆ ಕ್ರಮದಿಂದ ಒಟ್ಟು 40000/– ಕೋಟಿ ರೂಪಾಯಿಯ ಆದಾಯ ಕೊರತೆಯನ್ನು ಕೇಂದ್ರ ಅಂ–ದಾಜಿಸಿದ್ದು ಅದನ್ನು ತಂಬಾಕು ಉತ್ಪನ್ನ ,ಪಾನ್ ಮಸಾಲಾ ,ಗುಟ್ಕಾದಂತಹ ಏನು ಪಾಪದ ಉತ್ಪನ್ನಗಳೆಂದು ಹೇಳಲ್ಪಡುವ ವಸ್ತುಗಳ ಮೇಲೆ ಹಾಗು ಐಷಾರಾಮಿ ವಸ್ತುಗಳ ಮೇಲೆ 40 % ತೆರಿಗೆಯ ಮುಖಾಂತರ ಆದಾಯ ಸರಿದೂಗಿಸುವ ಪ್ರಯತ್ನ ಮಾಡಿದ್ದು ,ಸರಕಾರ ಆದಾಯಕ್ಕಾಗಿ ಇರದೇ ಜನಸಾಮಾನ್ಯರ ಕಲ್ಯಾಣ–ಕ್ಕಾಗಿ ಅನ್ನುವದನ್ನು ಈ ಮೊದಲು ಹಲವಾರು ಬಾರಿ ಹಲವಾರು ಉತ್ಪನ್ನಗಳ ಬೆಲೆ ಇಳಿಸುವ ಮುಖಾಂತರ ಕೇಂದ್ರ ಜನಪರವಾಗಿ ದಾಪುಗಾಲು ಹಾಕುತ್ತಿದೆ ಎಂದು ಬಾಗಲಕೋಟೆ ಜಿಲ್ಲಾಧ್ಯಕ್ಷರಾದ ಶ್ರೀ ಶಾಂತಗೌಡ ಪಾಟೀಲರು ಹಾಗೂ ಜಿಲ್ಲಾ ವಕ್ತಾರ ಸತ್ಯನಾರಾಯಣ ವೀ ಹೇಮಾದ್ರಿ ಪತ್ರಿಕಾ ಪ್ರಕಟಣೆ ಮುಖಾಂತರ ಕೇಂದ್ರವನ್ನು ಶ್ಲಾಘಿಸಿದ್ದಾರೆ .

# ಚೇಂಜ್ ಆಗು ನೀ...




ಬದುಕೆಂಬ ಸುಂದರ ಬಿಳಿಯ ಪುಟಗಳಲ್ಲಿ ಜೀವಿತದ ಪ್ರತಿ ಕ್ಷಣವನ್ನು ರಂಗು ಗೊಳಿಸಿ ಚಿತ್ತಾರ ಮೂಡಿಸಬೇಕು. ಇರುವ ಸಮಯದಲ್ಲಿ ಮನೋ ಇಚ್ಛಾನುಸಾರ ಪರರನ್ನು ಘಾಸಿಮಾಡದೆ ಒಂದು "ಸ್ಮೈಲ್" ಜೊತೆಗೆ ಎಲ್ಲವನ್ನು ಮರೆತಂತೆ ಬದುಕಿ ಬಿಡಿ . ನೋಡಿ ! ಜೀವನವೆಂದರೆ ಸಾಕಷ್ಟು ಕಷ್ಟ ಸುಖಗಳ ನಾಟಕದ ಸನ್ನಿವೇಶಗಳಾಗಿವೆ ಎಲ್ಲಾ ಸಂಗತಿಗಳನ್ನು ಸಮವಾಗಿ ತೆಗೆದುಕೊಂಡು ಮುಂಬರುವ ಸಮಯಕ್ಕೆ ಮಹತ್ವಾಕಾಂಕ್ಷೆ ಇಟ್ಟುಕೊಳ್ಳುವುದೇ ಜೀವನ. ಬದುಕಲ್ಲಿ ವಿದ್ಯಾಭ್ಯಾಸದಲ್ಲಿ ಫೇಲ್ ಆಗಬಹುದು, ಲವ್ ಫೇಲ್ ಆಗಬಹುದು, ಮತ್ತೆ ಬ್ಯುಸಿನೆಸ್ ಫೇಲ್ ಆಗಬಹುದು ಆದರೆ ನಮ್ಮಲ್ಲಿಯ ಆತ್ಮಸ್ಥೈರ್ಯ ಎಂದಿಗೂ ಫೇಲ್ ಆಗಬಾರದು. ನಿಜ ಆ ಸಮಯದಲ್ಲಿ ನಮಗೆ ಜೀವನವೇ ಬೇಡ ನಾನು ಬದುಕಿದ್ದು ವ್ಯರ್ಥ ಎಂದೆನಿಸಬಹುದು ಜೊತೆಗೆ ಮುಂದೆ ನನಗೆ ಯಾವ ಮಾರ್ಗಗಳು ಇಲ್ಲ ಎಂದು ಕೈಚಳ್ಳಿ ಕುಳಿತುಕೊಳ್ಳಬಹುದು ಹೀಗೆ ಮಾಡಿದರೆ ನಾವು ನಿಜವಾಗಿ ಅಲ್ಲಿ ಫೇಲಾಗುತ್ತೇವೆ. ಆದ್ದರಿಂದ ಬಂದಂತಹ ಆ ಕೆಟ್ಟ ಸಮಯವನ್ನು ಬೇರೊಂದು ಕಾರ್ಯದಲ್ಲಿ ಮಘ್ನರಾಗುವ ಮೂಲಕ ಅದನ್ನು ನಾವು ಸಮತೋಲಿಸಬಹುದು, ಕೆಳಗೆ ಬಿದ್ದ ಸಂಗತಿಯಿಂದಲೇ ಬೇರೆ ಯಶಸ್ವಿ ಮಾರ್ಗದ ಶೋಧನೆ ಮಾಡಬೇಕು. ಆಗ ಜೀವನದಲ್ಲಿ ಬದಲಾವಣೆಯ ಪರ್ವ ಪ್ರಾರಂಭವಾಗುವುದು.

ಹೀಗೆ ಒಂದು ಕಥೆ ಸಾಗರ್ ಎನ್ನುವ ಯುವಕ ನೋಡಲು ತುಂಬಾ ಸುಂದರನಾಗಿದ್ದ ಆದರೆ ಏನು ಮಾಡುವುದು ವಿದ್ಯೆ ಸ್ವಲ್ಪವೂ ಅವನತ್ತ ಸುಳಿಯಲಿಲ್ಲಾ, ಮನೆಯಲ್ಲಿ ಪಾಲಕರು ಟ್ಯೂಷನ್ ಅದು ಇದು ಅಂತ ಸಾಕಷ್ಟು ಪ್ರೋತ್ಸಾಹ ಕೊಟ್ಟರು ಎಸ್ ಎಸ್ ಎಲ್ ಸಿ ಯಲ್ಲಿ ಕೇವಲ 42 ಶ್ರೇಣಿಯನ್ನು ಪಡೆದುಕೊಂಡನು , ಹಾಳಾಗಿ ಹೋಗ್ಲಿ ಅಂತ ಪಿಯು ಕಾಲೇಜಿಗೆ ಸೇರಿಸಿದರು ಅಲ್ಲಿಯೂ ಅವನಿಗೆ ಓದಲು ಇಷ್ಟವಿಲ್ಲ ಒತ್ತಾಯದ ಮೇರೆಗೆ ಕಾಲೇಜಿಗೆ ಹೋಗುತ್ತಿದ್ದ ಆಗ ಅಲ್ಲಿ ಒಬ್ಬ ಶಾಲಿತ ಎನ್ನುವಂತಹ ಹುಡುಗಿ ನೋಡಲು ತುಂಬಾ ಸುಂದರ ಹಾಗೂ ಬುದ್ಧಿವಂತಳಾಗಿದ್ದಳು, ಅವಳನ್ನು ನೋಡಿದ ಮೇಲೆ ಇವನಿಗೆ ಅವಳಲ್ಲಿ ಒಲವು ಮೂಡಿತು ಹೇಗಾದರೂ ಮಾಡಿ ಅವಳಲ್ಲಿ ತನ್ನ ಪ್ರೀತಿಯ ನಿವೇದನೆಯನ್ನು ಮಾಡಬೇಕೆಂದು ಸಾಕಷ್ಟು ಗಿಮಿಕ್ ಗಳನ್ನು ಮಾಡತೊಡಗಿದ,ಅದರಲ್ಲಿ ಒಂದು ಗ್ರಂಥಾಲಯಕ್ಕೆ ಹೋಗಿ ಓದುವ ಕೆಲಸ. ದಿನಾಲು ಶಾಲಿತಾಳು ಗ್ರಂಥಾಲಯಕ್ಕೆ ಹೋಗಿ ಅಭ್ಯಾಸವನ್ನು ಮಾಡುತ್ತಿದ್ದಳು ಅವನು ಕೂಡ ಗ್ರಂಥಾಲಯಕ್ಕೆ ಹೋಗಿ ಅವಳಿಗೋಸ್ಕರ ಕೆಲ ಪುಸ್ತಕಗಳನ್ನು ತಿರವಿ ಹಾಕುತ್ತಿದ್ದ ಹೀಗೆ ದಿನಾಲು ಗ್ರಂಥಾಲಯಕ್ಕೆ ಹೋಗುವುದು ರೂಢಿಯಾಗಿ ಅವನು ಪುಸ್ತಕ ಪ್ರೇಮಿಯಾದ. ಶಾಲಿತಾಳ ಪ್ರೀತಿಯ ಗೀಳಿಗಿಂತಲೂ, ಸಾಗರ ಪುಸ್ತಕದ ಗೀಳನ್ನು ಹೆಚ್ಚಾಗಿ ತಲೆಗೆ ಹಚ್ಚಿಕೊಂಡನು ಮುಂದೆ ಉತ್ತಮ ಓದುಗಾರನಾಗಿ ಬದಲಾ(ಚೇಂಜ್) ದನು . ಅವನ ಬುದ್ಧಿಮಟ್ಟದಲ್ಲಿ ಸಾಕಷ್ಟು ಬದಲಾವಣೆಯಾಯಿತು ಒಂದೊಮ್ಮೆ ಶಾಲಿತ ಲೈಬ್ರರಿಗೆ ಹೋಗದೆ ಇದ್ದರೂ ಕೂಡ ಸಾಗರ ಹೋಗಿ ಪುಸ್ತಕಗಳನ್ನು ಓದಿ ಜ್ಞಾನವನ್ನು ಪಡೆದುಕೊಳ್ಳುತ್ತಿದ್ದ ಮುಂದೆ ಕಾಲೇಜಿನ " ಟಾಪರ್ " ಆಗಿ ಹೊರಬಂದ ಹೀಗೆ ಉತ್ತಮ ಅಧ್ಯಯನದಿಂದ ಸಾಗರನು ದೊಡ್ಡ ಆಫೀಸರ್ ಹುದ್ದೆ ಏರಿದ ಆದರೆ ಸಾಗರ್ ಈ ಹಿಂದೆ ಲೈಬ್ರರಿಗೆ ಬಂದ ಉದ್ದೇಶವೇ ಬೇರೆಯಾಗಿತ್ತು ಆದರೆ ಅವನಲ್ಲಾದ ಬದಲಾವಣೆಯು (ಚೇಂಜಸ್) ಅವನನ್ನು ಉತ್ತಮ ಜೀವನ ರೂಪಿಸಿಕೊಳ್ಳುವುದರಲ್ಲಿ ಸಹಾಯ ಮಾಡಿತು ಆ ಚೇಂಜಸ್ ಅನ್ನು ಬಳಸಿಕೊಂಡ ಸಾಗರ್ ಎಲ್ಲರಿಗೂ ಮಾದರಿ ವ್ಯಕ್ತಿಯಾದ. ಆದರೆ ಇಷ್ಟು ದೊಡ್ಡ ಗಿಫ್ಟ್ ಕೊಟ್ಟ ಶಾಲಿ ತಾಳಿಗೆ ಕೊನೆತನಕವೂ ಅವನು " ಲವ್ ಯು" ಹೇಳಲೇ ಇಲ್ಲಾ ! ಹೀಗೆ ಬದುಕಿನಲ್ಲಿ ನಮಗೆ ತಿಳಿದೋ ತಿಳಿಯದೆಯೋ ನಮ್ಮ ಓಟದ ಮಾರ್ಗವು ಚೇಂಜ್ ಆಗುವುದು ಆಗ ನಾವುಗಳು ಆ ಚೇಂಜಸ್ಗಳಿಗೆ ಹೊಂದಿಕೊಂಡು ಬದುಕು ಸಾಗಿಸಿದರೆ ಯಶಸ್ವಿ ಖಂಡಿತವಾಗಿಯೂ ದೊರೆಯುವುದು.

* * *



ಅಶ್ವಿನಿ ಅಂಗಡಿ.
ಬದಾಮಿ

# ಮೆಕ್ಯಾನಿಕಲ್ ಮೇಸ್ತ್ರಿ ಯುವಕರ ಬಳಗದಿಂದ ಈದ್ ಮಿಲಾದ್ ಹಬ್ಬ ಆಚರಣೆ



**ಲೋಕಾಪುರ:** ನಾಡಿನ ಸಮಸ್ತ ಮುಸ್ಲಿಂ ಬಾಂಧವರಿಗೆ ಈದ್ ಮಿಲಾದ್ ಹಬ್ಬದ ಹಾರ್ದಿಕ ಶುಭಾಶಯಗಳು, ಶಾಂತಿ, ನೆಮ್ಮದಿ ಹಾಗೂ ಸೌಹಾರ್ದತೆಯ ಪ್ರತೀಕವಾಗಿರುವ ಈದ್ ಮಿಲಾದ್ ಹಬ್ಬ ಎಲ್ಲರ ಜೀವನದಲ್ಲಿ ಹೊಸ ಚೈತನ್ಯವನ್ನು ತುಂಬಲಿ ಎಂದು ಬಿಡಿಸಿಸಿ ಬ್ಯಾಂಕ ಮಾಜಿ ಉಪಾಧ್ಯಕ್ಷ ಶಿವಾನಂದ ಉದಪುಡಿ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ಮೆಕ್ಯಾನಿಕಲ್ (ಮೇಸ್ತ್ರಿ) ಮುಸ್ಲಿಂ ಯುವಕರ ಬಳಗದ ವತಿಯಿಂದ ಈದ್ ಮಿಲಾದ್ ಹಬ್ಬದ ನಿಮಿತ್ತ ಉಪಹಾರ ಹಾಗೂ ಶರಬತ್ ವಿತರಣಾ ಕಾರ್ಯಕ್ರಮದಲ್ಲಿ ಮುಸ್ಲಿಂ ಬಾಂಧವರಿಗೆ ಶುಭಾಶಯ ತಿಳಿಸಿ ಮಾತನಾಡಿದ ಅವರು ಪ್ರವಾದಿ ಮಹಮ್ಮದ ಅವರ ಜೀವನ ಸಂದೇಶಗಳಾದ ಸತ್ಯ, ಶಾಂತಿ, ಸಹಬಾಳ್ವೆ, ಮುಂತಾದವುಗಳನ್ನು ಲೋಕ ಕಲ್ಯಾಣದ ಹಾದಿಗೆ ಬೆಳಕಾಗಲಿ ಎಂದು ಆಶಿಸುತ್ತೇನೆ ಈದ್ ಮಿಲಾದ್ ಹಬ್ಬವು ಸಮಸ್ತ ಬಾಂಧವರಿಗೆ ಒಳ್ಳೆಯದಾಗಲಿ ಎಂದರು.

ಯುವ ಧುರೀಣ ಹಾಗೂ ವಾಯುಪುತ್ರ ಸೌಹಾರ್ದ ಬ್ಯಾಂಕ್ ಅಧ್ಯಕ್ಷ ಲೋಕಣ್ಣ ಕತ್ತಿ ಮಾತನಾಡಿ ಪ್ರವಾದಿ ಮಹಮ್ಮದ ಅವರ ಜನ್ಮ ದಿನವನ್ನು ಆಚರಿಸಲು ಒಂದು ಪವಿತ್ರ ದಿನವಾಗಿದ್ದು, ಅವರು ಹಾಕಿಕೊಟ್ಟ ಮೌಲ್ಯಗಳ ಕಡೆ ಸಾಗೋಣ ಸಮಾಜದಲ್ಲಿ ಶಾಂತಿ, ನೆಮ್ಮದಿ ಸೌಹಾರ್ದತೆ, ಸಾಮರಸ್ಯ ಮೂಡಿಸಲು ಪ್ರವಾದಿಯವರು ನೀಡಿದ ಸಂದೇಶವನ್ನು ಬದುಕಿನಲ್ಲಿ ಪಾಲಿಸುವುದಕ್ಕಾಗಿ ಈದ್ ಮೀಲಾದ ಮಹತ್ವದ್ದಾಗಿದೆ, ನಿಮ್ಮ ಕಷ್ಟಗಳನ್ನು ನಿವಾರಿಸಲಿ ಮತ್ತು ನಿಮ್ಮ ಜೀವನದಲ್ಲಿ ಸಂತೋಷ ಸಮೃದ್ಧಿ ನೆಲೆಸಲಿ ಎಂದು ಹಾರೈಸಿದರು.

ಜನಶಕ್ತಿ ಸೌಹಾರ್ದ ಬ್ಯಾಂಕಿನ ನಿರ್ದೇಶಕ ರಫೀಕ ದಫೇದಾರ ಮಾತನಾಡಿ ದೇಶದ ಪ್ರಗತಿ ಹಾಗೂ ಎಲ್ಲಾ ಧರ್ಮದ ಜನರ ಶ್ರೇಯಸ್ಸಿಗಾಗಿ ಮಸೀದಿ, ದರ್ಗಾಗಳಲ್ಲಿ ವಿಶೇಷ ಪ್ರಾರ್ಥನೆ ಮಾಡಲಾಗುತ್ತದೆ, ಇದೇ ವೇಳೆ ಸಮುದಾಯದ ಸ್ಥಿತವಂತರು ಬಡವರಿಗೆ ಆಹಾರ ಧಾನ್ಯ ಸೇರಿದಂತೆ ಅವಶ್ಯ ವಸ್ತುಗಳನ್ನು ದಾನ ಮಾಡುವರು ಎಂದರು.

ಗ್ಯಾರೇಜ್‌ಗಳಿಗೆ ಹೂಗಳಿಂದ ಶೃಂಗಾರ: ಈ ಸಂದರ್ಭದಲ್ಲಿ ಈದ್ ಮಿಲಾದ್ ಹಬ್ಬದ ನಿಮಿತ್ತ ಮೆಕ್ಯಾನಿಕಲ್ (ಮೇಸ್ತ್ರಿ) ಮುಸ್ಲಿಂ ಯುವಕರ ಬಳಗದವರು ತಮ್ಮ ತಮ್ಮ ಗ್ಯಾರೇಜಗಳನ್ನು ಪರಪರಿ, ಹೂಗಳಿಂದ ಶೃಂಗರಿಸಿದ್ದರಿಂದ ನೋಡುಗರ ಗಮನ ಸೆಳೆಯಿತು.

ಉಪಹಾರ ಮತ್ತು ಶರಬತ್ ವಿತರಣೆ: ಬೆಳಗಾವಿ–ರಾಯಚೂರು ರಾಜ್ಯ ಹೆದ್ದಾರಿಯಲ್ಲಿ ಬರುವ ಎಲ್ಲ ವಾಹನ ಸವಾರರಿಗೆ, ಪ್ರಯಾಣಿಕರಿಗೆ ಹಾಗೂ ಸಾರ್ವಜನಿಕರಿಗೆ ಉಪಹಾರ ಮತ್ತು ಶರಬತ್ ವಿತರಿಸುವ ಮೂಲಕ ಈದ್ ಮಿಲಾದ ಹಬ್ಬವನ್ನು ಸೌಹಾರ್ಧತೆಯಿಂದ ಸಂಭ್ರಮದಿಂದ ಆಚರಿಸಿದರು. ಮುಸ್ಲಿಂ ಬಾಂಧವರು ಬಂದ ಸಾರ್ವಜನಿಕರಿಗೆ ಅಲ್ಪೋಪಹಾರ ವ್ಯವಸ್ಥೆ ಹಾಗೂ ಶರಬತ್ ನೀಡಿ ಹಸ್ತಲಾಘವ ಮಾಡಿದರು. ಪರಸ್ಪರ ಈದ್ ಮೀಲಾದ್ ಶುಭಾಶಯ ತಿಳಿಸಿದರು.

ಈ ವೇಳೆ ಬಿ.ವ್ಹಿ. ಹಲಕಿ, ಆನಂದ ಹಿರೇಮಠ, ಅಲ್ಲಾಸಾಬ ಯಾದವಾಡ, ರಫೀಕ ಬೈರಕದಾರ, ಪ್ರಕಾಶ ಚುಳಕಿ, ರವಿ ಕಗಲಗೊಂಬ, ಸೈಯದ ಜೀರಗಾಳ, ಗುಲಾಬಸಾಬ ಅತ್ತಾರ, ಅಂಜುಮನ್ ಇಸ್ಲಾಂ–ಎ–ಕಮೀಟಿ ಅಧ್ಯಕ್ಷ ಹಸನಡೋಂಗ್ರಿ ಮಹಾಲಿಂಗಪುರ, ಮಹಮ್ಮದರಫೀಕ ದಫೇದಾರ, ಮಲ್ಲನಗೌಡ ಪಾಟೀಲ, ರಾಜು ಮಕಾನದಾರ, ಅಪ್ಸರ ಚೌಧರಿ, ಸಲೀಮ ಬಳಿಗಾರ, ಡಾ। ಬಸವರಾಜ ಹಿರೇಮಠ, ಸುಲ್ತಾನ ಕಲಾದಗಿ, ಯಲ್ಲಪ್ಪಗೌಡ ಕೃಷ್ಣಗೌಡರ, ಪೀರಸಾಬ ಸೈಯದ, ಜಾಕೀರ ಅತ್ತಾರ, ಎಸ್‌ಡಿಎಂಸಿ ಅಧ್ಯಕ್ಷ ಶಬ್ಬೀರಸಾಬ ಅತ್ತಾರ, ಪಿಎಸ್‌ಐ ಕಾಡಪ್ಪ ಜಕ್ಕನ್ನವರ, ರಿಯಾಜ ಮಕಾನದಾರ, ಅಬ್ದುಲ್‌ರಹಿಮಾನ ತೊರಗಲ್, ಸೈಯ್ಯದ ನದಾಫ, ಸೈಯ್ಯದ ಗುದಗಿ, ಹಾರುನ ಸುತಾರ, ದಸ್ತಗೀರ ಗಂಗಾವತಿ, ರಫೀಕ ಅತ್ತಾರ, ಫಯಾಜ ಮನಿಯಾರ, ಜಾವೀದ ಮುಧೋಳ, ಸಾಧಿಕ ಪಠಾಣ, ರಿಯಾಜ ಬಾಗವಾನ, ಪಟ್ಟಣದ ಎಲ್ಲ ಸಮಾಜದ ಹಿರಿಯರು, ಮುಖಂಡರು, ಗ್ರಾಮಸ್ಥರು ಹಾಗೂ ಮೆಕ್ಯಾನಿಕಲ್ ಮೇಸ್ತ್ರಿ ಮುಸ್ಲಿಂ ಯುವಕರ ಬಳಗ, ಮಕ್ಕಳು ಇದ್ದರು.

# ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಅನ್ನಸಂತರ್ಪಣೆ ಮಾಡುವ ಮೂಲಕ ಈದ ಮಿಲಾದ ಆಚರಣೆ

**ಬಾಗಲಕೋಟೆ :** ನಗರದ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಕ್ರೀಡಾ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಪ್ರವಾದಿ ಮೊಹಮ್ಮದ್ (ಸ) ಅವರ ಜನ್ಮದಿನದ ಅಂಗವಾಗಿ ಶುಕ್ರವಾರ ಜಿಲ್ಲಾ ಆಸ್ಪತ್ರೆಯಲ್ಲಿ ರೋಗಿ ಗಳಿಗಾಗಿ ಅನ್ನ ಸಂತರ್ಪಣೆ ಮಾಡುವ ಮೂಲಕ ಈದ ಮಿಲಾದ ಹಬ್ಬವನ್ನು ವಿಶೇಶವಾಗಿ ಆಚರಿಸಲಾಯಿತು. ಈ ಸಂಧರ್ಭದಲ್ಲಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಜಿಲ್ಲಾ ಪ್ರಚಾರ ಸಮಿತಿಯ ಅಧ್ಯಕ್ಷರಾದ ಶ್ರೀಯುತ ನಾಗರಾಜ ಅಣ್ಣಾ ಹದ್ಲಿ ಅವರು ಮಾತನಾಡಿ " ಪ್ರವಾದಿ ಮೊಹಮ್ಮದ್ (ಸ) ಅವರ 1500 ನೇ ಜನ್ಮದಿನದ ಪ್ರಯುಕ್ತವಾಗಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಕ್ರೀಡಾ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಜಿಲ್ಲಾಸ್ಪತ್ರೆಯಲ್ಲಿನ



ರೋಗಿಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು. ಕಾರ್ಯಕ್ರಮ ಆಯೋಜಿಸಿದ ಸಂಸ್ಥೆಯ ಅಧ್ಯಕ್ಷರಾದ ಶ್ರೀಧರ ನೀಲನಾಯಕ ಮತ್ತು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಎಲ್ಲ ಮುಸ್ಲಿಂ ಮುಖಂಡರು ಹಾಗೂ ಭಾಂಧವ–ರಿಗೆ ಹಾರ್ದಿಕ ಅಭಿನಂದನೆಗಳು" ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷರಾದ ಶ್ರೀಯುತ ನಾಗರಾಜ ಅಣ್ಣಾ ಹದ್ಲಿ, ಕಾರಿ ಸಮೀಉಲ್ಲಾ ಖಾದ್ರಿ, ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಕ್ರೀಡಾ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶ್ರೀಧರ್ ಅ ನೀಲನಾಯಕ, ಕಾರ್ಯದರ್ಶಿಯಾದ ಶ್ರೀ ಶ್ರೀಕಾಂತ ಅ ನೀಲನಾಯಕ,ಸಂತೋಷಅನೀಲನಾಯಕ, ಇಲಿಯಾಸ್ ಮದರಖಂಡಿ,ಬಂದೆನೆಮಾಜ ಬಾದಾಮಿ, ಜಹೂರಅಬ್ಬಾಸ್ ಕಲಾಸಿ , ಲಕನ ರೋಕಡೆ , ಜಾವೀದ್ ಬೇಪಾರಿ, ಅಶ್ಫಾಕ್ ಬೇಪಾರಿ ,ಚಾಂದಸಾಬ ನಧಾಪ , ಸಯ್ಯದ ಬಳಗಾರ , ರವಿಂದ್ರ ಆಲೂರೂ , ಆರೀಫ್ ಡಾಲಾಯತ , ವಾಸಿಮ್ ಕಲಾದಗಿ , ಶಹಿನಶಾ ಡಾಲಾಯತ , ಪೈರೋಜ ಮುಜಾವಾರ , ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಆಶಾ ನೀಲನಾಯಕ , ರೇಖಾ ನೀಲನಾಯಕ , ಸುಮಂಗಲಾ ನೀಲನಾಯಕ , ಆಪ್ರೀನ ಶೇಖ, ರೋಷನಬಿ ನಜೀರ್‌ಅಹ್ಮದ್‌ಬೇಪಾರಿಹಾಗೂಸಂಸ್ಥೆಯ ಸರ್ವ ಸದಸ್ಯರು ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಸಂಭ್ರಮದಿಂದ ಈದ್ ಮಿಲಾದ್ ಆಚರಣೆ ಶಾಸಕ ಕಾಶಪ್ಪನವರ ಭಾಗಿ

**ಇಳಕಲ್ :** ನಗರದಲ್ಲಿ ಶುಕ್ರವಾರದಂದು ಈದ್ ಮಿಲಾದ್ ಅಂಗವಾಗಿ ಬೃಹತ್ ಮೆರವಣಿಗೆಯನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮಾಡಲಾಯಿತು.

ಮದೀನಾ ಮಸಜೀದದಿಂದ ಆರಂಭವಾದ ಮೆರವಣಿಗೆ ಮಹಾಂತೇಶ ಚಿತ್ರಮಂದಿರ, ನಗರಸಭೆ ಕಾರ್ಯಾಲಯ, ಕಂಠಿ ಸರ್ಕಲ್, ಸಾಲಪೇಟೆ, ಬಸವನಗುಡಿ, ವೆಂಕಟೇಶ ದೇವಸ್ಥಾನ, ಗಾಂಧಿ ಚೌಕ, ಗೊರಬಾಳ ನಾಕಾ, ವಾಲ್ಮೀಕಿ ದೇವಸ್ಥಾನ, ಅಲಂಪೂರಪೇಟೆಯ ಮಾರ್ಗವಾಗಿ ಮುರ್ತುಜಾ ಖಾದ್ರಿ ದರ್ಗಾಕ್ಕೆ ಹೋಗಿ ಅಲ್ಲಿ ಮುಕ್ತಾಯಗೊಂಡಿತು. ಮೆರವಣಿಗೆಯಲ್ಲಿ ವೀರಶೈವ ಲಿಂಗಾಯತ ಅಭಿವೃದ್ಧಿ





ನಿಗಮದ ಅಧ್ಯಕ್ಷ ಶಾಸಕ ವಿಜಯಾನಂದ ಕಾಶಪ್ಪನವರ ಭಾಗವಹಿಸಿದ್ದರು ಅವರನ್ನು ಸಮಾಜದ ಬಾಂಧವರು ಸತ್ಕರಿಸಿ ಗೌರವಿಸಿದರು.ನೇತೃತ್ವವನ್ನು ಅಂಜುಮನ್ ಇಸ್ಲಾಂ ಸಂಸ್ಥೆಯ ಅಧ್ಯಕ್ಷ ಉಸ್ಮಾನಗಣಿ ಹುಮ್ನಾಬಾದ್, ಲಿಮ್ರಾ ವೆಲ್ ಫೇರ್ ಅಸೋಸಿಯೇಷನ್ ಅಧ್ಯಕ್ಷ ಅಬ್ದುಲರಜಾಕ ತಟಗಾರಮತ್ತಿತರಪ್ರಮುಖರುವಹಿಸಿದ್ದರು. ಪಿಎಸ್ ಐ ಮಂಜುನಾಥ ಪಾಟೀಲ ಮತ್ತು ಪೋಲಿಸರು ಸೂಕ್ತ ಬಂದೋಬಸ್ತ ವ್ಯವಸ್ಥೆಯನ್ನು ಮಾಡಿದ್ದರು.

**ವರದಿ ನಬಿ ಹುಣಚಗಿ**

# ಕಲಾದಗಿಯಲ್ಲಿ ಸಂಭ್ರಮದ ಈದ್ ಮಿಲಾದ ಆಚರಣೆ

**ಕಲಾದಗಿ :** ಇಸ್ಲಾಂ ಧರ್ಮದ ಸಂಸ್ಥಾಪಕರಾದ ಜಗತ್ತಿಗೆ ಶಾಂತಿಯ ಸಂದೇಶವನ್ನು ಸಾರಿದ ಹಜರತ್ ಮಹಮ್ಮದ ಪೈಗಂಬರ ರವರ 1500 ಜನ್ಮೋತ್ಸವ ಸಡಗರ ಸಂಭ್ರಮದಿಂದ ನಡೆಯಿತು. ಸ್ಥಳೀಯ ಜಾಮಿಯಾ ಮಸ್ಜಿದಿಂದ ಪ್ರಾರಂಭವಾದ ಮೆರವಣಿಗೆಯು ಜೋಡ ಟಾಕಿ. ಸವಕಟ್ಟಾ. ತರಕಾರಿ ಮಾರ್ಕೆಟ್. ಗ್ರಾಮ ಪಂಚಾಯತಿ ಕಾರ್ಯಾಲಯ. ಕೊಬ್ರಿ ಕ್ರಾಸ್. ಡಾ. ಬಿ ಆರ್ ಅಂಬೇಡ್ಕರ್ ವೃತ್ತ . ರಂಗ ಮಂದಿರ. ಬರಗಿ ಮೆಡಿಕಲ್



ಶಾಪ್. ಸಂತೋಷ ಚಿತ್ರಮಂದಿರ. ಮುಖಾಂತರ ಹಾಯ್ದು ಹಜರತ್ ನೂರ ಅಲಿ ಶಾ ಬಾಬಾ ದರ್ಗಾಕ್ಕೆ ಸಮಪ್ತಗೊಂಡಿತು. ನಂತರ ದರ್ಗಾ ಅವರ ದಲ್ಲಿ ಅನ್ನ ಸಂತರ್ಪಣೆ ನಡಿಯಿತು. ಕೆಪಿಸಿಸಿ ಉಪಾಧ್ಯಕ್ಷ ಎಂ ಬಿ ಸೌದಾಗರ.ಕಲಾದಗಿಅಂಜುಮನ್ ಸಂಸ್ಥೆಯ ಅಧ್ಯಕ್ಷ ರಫೀಕಸಾಬ ಬೇಪಾರಿ. ಚಾಂದಸಾಬ ಕಲಾದಗಿ ಎಚ್ ಐ ರೋಣ. ಬಂದೇ ನವಾಜ ಸೌದಾಗರ. ಸಲೀಂ ಶೇಖ. ರಾಜೇ ಸಾಬ ಗೋಟೆ . ಬಾಬು ತೇಲಿ. ಮುನ್ನಾ ಕಲಾಸಿ. ಮಲಿಕ ಮಕಾನದಾರ. ಫಾರೂಕ ರೋಣ. ರಫೀಕ ಜತ್ತಿ. ಮಂಜುರ ಚೌಧರಿ. ಸಲೀಂ ಜಮಾದಾರ. ಜಮೀರ ಅಹ್ಮದ ಜಮಾದಾರ ಸೇರಿದಂತೆ ಇತರರು ಇದ್ದರು. ಐತಿಕರ ಘಟನೆ ನಡೆಯದಂತೆ ಮುಂಜಾಗ್ರತ ಕ್ರಮವಾಗಿ ಬಾಗಲಕೋಟೆ ಗ್ರಾಮೀಣ ಸಿಪಿಐ ಎಚ್ ಆರ್ ಪಾಟೀಲ್. ಕಲಾದಗಿ ಪಿಎಸ್‌ಐ ಪ್ರವೀಣ ಬೀಳಗಿ ನೇತೃತ್ವದಲ್ಲಿ ಪೋಲಿಸ್ ಬಂದು ಬಸ್ತ್ ಕಲ್ಪಿಸಿದ್ದರು.

# ಬನಹಟ್ಟಿಯಲ್ಲಿ ಸಂಭ್ರಮದ ಈದ್ ಮಿಲಾದ್



**ಬನಹಟ್ಟಿ:** ಇಲ್ಲಿ ಈದ ಮಿಲಾದ ಸಂಭ್ರಮ ಸಡಗರದಿಂದ ನಡೆಯಿತು. ಈ ನಿಮಿತ್ಯ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ನಂತರ ಶಾಲಾ ಆವರಣದಲ್ಲಿ ಸಭೆ ನಡೆಯಿತು.

ಈ ಸಂದರ್ಭದಲ್ಲಿ ಡಾ. ಅಕ್ಬರ್ ತಾಂಬೋಳಿ ಮಾತನಾಡಿ, ಪ್ರವಾದಿ ಮಹಮ್ಮದ್ ಪೈಗಂಬರರ 1500 ನೇ ಜನ್ಮ ದಿನಾಚರಣೆ ಈ ಬಾರಿ ಶಿಕ್ಷಕರ ದಿನದಂದೇ ಬಂದಿದೆ. ಪೈಗಂಬರರು ಕೂಡ ಓರ್ವ ಶಿಕ್ಷಕರಾಗಿದ್ದರು ಎಂಬುದನ್ನು ಕುರಾನ್ ಸ್ಪಷ್ಟಪಡಿಸಿದೆ. ನಿಮ್ಮಲ್ಲೇ ಓರ್ವರನ್ನು ನಾವು ಸಂದೇಶವಾಹಕರಾಗಿ ಕಳುಹಿಸುತ್ತೇವೆ. ಅವರು ನಮ್ಮ ಸದ್ವಚನಗಳನ್ನು ನಿಮಗೆ ಓದಿ ಕೊಡುತ್ತಾರೆ. ನಿಮ್ಮನ್ನು ಶುಚಿಗೊಳಿಸುತ್ತಾರೆ. ನಿಮಗೆ ದಿವ್ಯ ಗ್ರಂಥವನ್ನೂ ತತ್ವಜ್ಞಾನವನ್ನೂ ಕಲಿಸುವಲ್ಲಿ ಮಹಮ್ಮದ್ ಪೈಗಂಬರರ ಕೊಡುಗೆ ಶ್ರೇಷ್ಠವಾದುದು ಎಂದು ತಿಳಿಸಿದರು.

ಈದ್ ಮುಸ್ಲಿಂ ಸಮುದಾಯವಷ್ಟೇ ಅಲ್ಲದೆ ಹಿಂದೂ ಸಮಾಜದವರನ್ನು ಒಂದುಗೂಡಿಸುವ ಹಬ್ಬವಾಗಿದೆ ಎಂದರು.

ವೇದಿಕೆ ಮೇಲೆ ಹಾಜಿ ಜಂಗಿ ಜನಾಬ್, ಮಲ್ಲಿಕ್ ಮುಲ್ಲಾ, ಸರದಾರ ಡಾಂಗೆ, ಮುರಾದ ಜಮಖಂಡಿ, ಸಿರಾಜ ಮಳಲಿ, ಜಾಫರ ಫಣಿಬಂದ, ಸಲೀಂ ಜಕಾತಿ, ಫಿರೋಜ, ಇರ್ಷಾದ ಮೋಮಿನ್, ಬಾದಶಾಹ ಜಕಾತಿ, ಸಿದ್ಧನಗೌಡ ಪಾಟೀಲ, ಹಾರೂನ್ ಬೇವೂರ, ಬುಡಾನ್ಸಾಬ ಬಾರಿಗಡ್ಡಿ ಸೇರಿದಂತೆ ಅಂಜುಮಾನ್ ಎ ಇಸ್ಲಾಂ ಗುಲ್ಶಾನ್ ಎ. ರಜಾ ಎ. ಹುಸೇನ್ ಮದರಸಾ ಸದಸ್ಯರು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ದಾನದಿಂದ ಮನಸ್ಸಿಗೆ ನೆಮ್ಮದಿ, ಶಾಂತಿ

**ರಬಕವಿ–ಬನಹಟ್ಟಿ :** ದಾನ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ, ಶಾಂತಿ ಸಿಗುತ್ತದೆ. ಇದು ವೈಜ್ಞಾನಿಕವಾಗಿಯೂ ದೃಢಪಟ್ಟಿದೆಯೆಂದು ಹಿರೇಮಠದ ಶರಣಬಸವ ಶಿವಾಚಾರ್ಯರು ತಿಳಿಸಿದರು.

ಬನಹಟ್ಟಿಯ ಆರಾಧ್ಯದೈವ ಕಾಡಸಿದ್ಧೇಶ್ವರ ದೇವಾಲಯದ ಮುಂಭಾಗದಲ್ಲಿ ಸುಮಾರು ಐದು ಲಕ್ಷ ರೂ. ಗಳ ವೆಚ್ಚದಲ್ಲಿ ಇಟ್ಟಿಗೆ (ಬ್ರಿಕ್ಸ್) ರಸ್ತೆ ಉದ್ಘಾಟನೆ ಸಂದರ್ಭ ಮಾತನಾಡಿದ ಅವರು 85 ರ ಇಳಿ ವಯಸ್ಸಿನಲ್ಲಿ ಕೊಡಿಟ್ಟ ಹಣದಲ್ಲಿ ಇಂತಹ ಸತ್ಕಾರ್ಯವನ್ನು ಆದ–್ಯಾತ್ಮಿಕವಾಗಿ ಆರ್ಥಿಕವಾಗಿ ದಾನ ಮಾಡಿರುವುದು ನಿಜಕ್ಕೂ ಮಾದ–ರಿಯಾಗಿದೆ. ಕಳೆದ ವರ್ಷವಷ್ಟೇ ಸುಮಾರು ಐದು ಲಕ್ಷ ರೂ.



ಗಳ ವೆಚ್ಚದಲ್ಲಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಕಾರಣ–ರಾದ ಸುಂಕದ ಅವರು ನಿಜಕ್ಕೂ ಮಾದರಿಯಾಗಿದ್ದಾರೆಂದರು.

ಶಾಸಕ ಸಿದ್ದು ಸವದಿ ಮಾತನಾಡಿ, ದಾನವು ಸಮುದಾಯದ ಭಾವನೆ, ಸಂತೃಪ್ತಿ ಮತ್ತು ಉದಾರತೆಯನ್ನು ನೀಡುತ್ತದೆ. ದಾನವನ್ನು ಭಕ್ತಿಯಿಂದ ಮತ್ತು ಸ್ವಯಂ ಪ್ರೇ–ರಿತವಾಗಿ ಮಾಡಿದಾಗ ಅದ–ರಿಂದ ಶ್ರೇಷ್ಠ ಫಲಿತಾಂಶಗಳು ದೊರಕುತ್ತವೆ ಎಂದರು.

ದಾನಿ ಸಿದಗಿರೆಪ್ಪ ಸುಂಕದ ಮಾತನಾಡಿ, ಜೀವನದಲ್ಲಿ ದುಡಿದ ಹಣದಲ್ಲಿ ಕೊಂಚ ದೇವರು ಪಾಲು ಎಂಬುದು ಇರುತ್ತದೆ. ಈ ರೂಪದಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕೆಂದು ನನ್ನ ಸೇವೆ ನಿರಂತರವಾಗಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಗೆ ಸ್ವಯಂಪ್ರೇರಿತ ಬದ್ಧನೆಂದು ಮನದಾಳದಿಂದ ತಿಳಿಸುತ್ತಿದ್ದಂತೆ ಕೆಲ ಹೊತ್ತು ಭಾವುಕರಾದರು.

ಶ್ರೀಶೈಲ ದಭಾಡಿ, ದಾನಪ್ಪ ಹುಲಜತ್ತಿ, ಪಂಡಿತ ಪಟ್ಟಣ, ಧರೆಪ್ಪ ಉಳ್ಳಾಗಡ್ಡಿ, ಗೌರಿ ಮಿಳ್ಳಿ, ವಿವೇಕ ಸುಂಕದ, ಬಸವರಾಜ ಗುಂಡಿ, ಸಿದ್ಧನಗೌಡ ಪಾಟೀಲ, ಶ್ರೀಶೈಲ ಉಳ್ಳಾಗಡ್ಡಿ, ಶೈಲಾ ಸುಭಾಸ ಆದರಗಿ, ಶೋಭಾ ಬಾಳಪ್ಪ ಗುಂಡಿ, ಸಂಗಮೇಶ ಸುಂಕದ, ಶ್ರೀಪಾದ ಬಾಣಕಾರ, ಚಂದ್ರು ಕೊಕಟನೂರ, ಪ್ರವೀಣ ದಭಾಡಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಸರ್ವಾಂಗೀಣ ಅಭಿವೃದ್ಧಿಗೆ ಜೀವವಿಮೆ: ಗುರುಸಿದ್ಧೇಶ್ವರಶ್ರೀ



**ರಬಕವಿ :** ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಜೀವವಿಮೆ ಪೂರಕವಾಗಿದೆ ಎಂದು ರಬಕವಿಯ ಬ್ರಹ್ಮಾನಂದ ಆಶ್ರಮದ ಪೂಜ್ಯ ಗುರುಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ಅವರು ರಬಕವಿಯ ಜೀವ ವಿಮಾ ಸೆಟ್ ಲೈಟ್ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಭಾರತೀಯ ಜೀವ ವಿಮೆಯ ಸಪ್ತಾಹ ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿ ಮಾತನಾಡುತ್ತಿದ್ದರು. ಜೀವವಿಮೆಯಿಂದ ಉಳಿತಾಯ ಮಾಡುವ ಪ್ರವೃರ್ತಿ ಬೆಳೆಯುತ್ತಿದೆ. ರಾಷ್ಟ್ರದ ಅಭಿವೃದ್ಧಿಯಲ್ಲಿಯೂ ಜೀವ ವಿಮೆಯ ಪಾತ್ರವಿದೆ ಎನ್ನುವುದು ಮಹತ್ವದ ಸಂಗತಿಯಾಗಿದೆ ಎಂದು ಶ್ರೀಗಳು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಯಶವಂತ ವಾಜಂತ್ರಿ, ನಿವೃತ್ತ ನೌಕರರಸಂಘದಅಧ್ಯಕ್ಷಮೃತ್ಯುಂಜಯರಾಮದುರ್ಗ ಆಗಮಿಸಿದ್ದರು. ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಡಿ. ಬಾಪುಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಖಾಧಿಕಾರಿ ಪ್ರಕಾಶ ಕಾಂಬಳೆ ಅಧ್ಯಕ್ಷತೆ ವಹಿಸಿದ್ದರು. ಸಪ್ತಾಹದ ಅಂಗವಾಗಿ ಶಾಲಾ ಮಕ್ಕಳಿಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಅಭಿವೃದ್ಧಿ ಅಧಿಕಾರಿಗಳಾದ ರಾಜೇಂದ್ರ ಹುನ್ನೂರ, ರಾಜು ಕಾಳೆ, ಪ್ರತಿನಿಧಿಗಳಾದ ಅಶೋಕ ವಸ್ತ್ರದ, ಮಲ್ಲಿಕಾರ್ಜುನ ಕುಚನೂರ, ಸಿದ್ದಪ್ಪ ಮೇಣಿ, ಈರಣ್ಣ ಹಲಗತ್ತಿ,ಸತೀಶಮೋಟಗಿ,ಶಿವಾನಂದಕೆಂಚಪ್ಪನವರ, ಮುರಿಗೆಪ್ಪ ಬಿಲವಡಿ, ಸಂತೋಷ ಬಿಲವಡಿ, ಸುರೇಖಾ ಗಾಯಕವಾಡ, ಜ್ಯೋತಿ ಹ್ಯಾವಿನ, ಶೈಲಾ ಹುಲ್ಲೂರ, ಪುಷ್ಪಾ ಕಡಕೋಳ, ಅನಸೂಯಾ ಉಮರಾಣಿ, ಪ್ರಕಾಶ ಯರಗಟ್ಟಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಸಂಭ್ರಮದ ಚಿಮ್ಮಡದ ಕಿಚಡಿ ಜಾತ್ರೆ: ರಥೋತ್ಸವ

**ಚಿಮ್ಮಡ :** ಗ್ರಾಮದಲ್ಲಿ ಕಳೆದ ಎರಡು ದಿನಗಳ ಕಾಲ ಗ್ರಾಮದಲ್ಲಿ ಸಂಭ್ರಮ ಮೂಡಿಸಿದ್ದ ಆರಾಧ್ಯದೈವ ಪ್ರಭುಲಿಂಗೇಶ್ವರ ಕಿಚಡಿಜಾತ್ರೆಹಾಗೂರಥೋತ್ಸವವು ಹಲವಾರು ವಿಶೇಷಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಬುಧವಾರ ಮುಂಜಾನೆಯೇ ಸರದಿಯಲ್ಲಿ ಕಿಚಡಿ ತಯಾ–ರಿಸುವ ಸಾಮಗ್ರಿ ಒಯ್ಯುವ ಸೇವಾ ನಿರತ ಅಲಂಕೃತ ಟ್ರ್ಯಾಕ್ಟರಗಳು ಸಂಜೆಯ ಹೊತ್ತಿಗೆ ನೂರರ ಗಡಿ ದಾಟಿದ್ದವು. ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದಿಂದ ಸುಮಾರು ಎರಡು ಕಿ. ಮಿ. ವರೆಗೆ ಸರದಿ ಸಾಲಿನಲ್ಲಿ ನಿಂತಿದ್ದವು. ರಾತ್ರಿ ಹತ್ತು ಘಂಟೆಯಿಂದ ಓಂ ಪ್ರಭುಲಿಂಗೇಶ್ವರಸೇವಾಸಮಿತಿಯ ಪ್ರಮುಖರು ಕಿಚಡಿ ಪ್ರಸಾದದ ಸಾಮಗ್ರಿಯನ್ನು ಪ್ರತಿಯೊಂದು ಟ್ರ್ಯಾಕ್ಟರಗಳಲ್ಲಿ ಗ್ರಾಮದಿಂದ ಒಂದು ಕಿ.ಮಿ. ದೂರದ ಗುಡ್ಡದ ಪ್ರಭುಲಿಂಗೇಶ್ವರ ದೇವಸ್ಥಾನಕ್ಕೆ ಸಾಗಿಸಲಾಯಿತು. ಈ ಅಲಂಕೃತ ಟ್ರ್ಯಾಕ್ಟರಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಒಂದೊಂದು ಟ್ರ್ಯಾಕ್ಟರಗಳ ಶೃಂಗಾರಕ್ಕೆ ರೈತರು



ಇಪ್ಪತ್ತು ಸಾವಿರದಿಂದ ಒಂದು ಲಕ್ಷ ರೂ.ಗಳವರೆಗೆ ಖರ್ಚು ಮಾಡಿರುತ್ತಾರೆ. ಗುರುವಾರ ಬೆಳಿಗ್ಗೆ ಆರು ಗಂಟೆಗೆ ನಡೆಯುವ ರುದ್ರಾಭಿಷೇಕದೊಂದಿಗೆ ಪ್ರಾರಂಭಗೊಂಡ ಜಾತ್ರೆಯಲ್ಲಿ ಷಟ್ ಸ್ಥಲ ಧ್ವಜಾರೋಹಣ, ಅಡ್ಡ ಪಲ್ಲಕ್ಕಿಮಹೋತ್ಸವನಂತರನಡೆದ ವಚನ ಚಿಂತನ ಗೋಷ್ಠಿಯಲ್ಲಿ ನಾಡಿನ ಅನೇಕ ಮಠಗಳ ಪೂಜ್ಯ ಮಠಾಧೀಶರು, ರಾಜಕೀಯ ನಾಯಕರು ಪಾಲ್ಗೊಂಡಿದ್ದರು.

ಮುಂಜಾನೆ 11 ಗಂಟೆಗೆ ಶ್ರೀಗಳ ಹಸ್ತ ಸ್ಪರ್ಶದೊಂದಿಗೆ ಆರಂಭಗೊಂಡ ಕಿಚಡಿ ಪ್ರಸಾದ ವಿತರಣೆಯಲ್ಲಿ ಬಾಗಲಕೋಟ, ವಿಜಯಪುರ, ಬೆಳಗಾವಿ ಜಿಲ್ಲೆಯಲ್ಲದೇ ನೆರೆಯ ಮಹಾರಾಷ್ಟ್ರದಿಂದಲೂಲಕ್ಷಾಂತರ ಜನ ಭಕ್ತಾಧಿಗಳು ಆಗಮಿಸಿ ಕಿಚಡಿ ಪ್ರಸಾದ ಸವಿದು ಶ್ರೀ ಪ್ರಭುವಿನ ಕೃಪೆಗೆ ಪಾತ್ರರಾದರು.

ಸಂಜೆ ಬೊಂಬೆ ವೇಷಧಾರಿ ಸೋಂಗು, ಕರಡಿ ಮಜಲು, ಡೊಳ್ಳು, ಬ್ಯಾಂಡ ಬಾಜಾ, ಹಲಗಿ ಮೇಳ ಸೇರಿದಂತೆ ವಿವಿಧ ವಾದ್ಯ ವೃಂದಗಳೊಂದಿಗೆ ನಡೆದ ಅಲಂಕೃತ ಜೋಡಿ ನಂದಿಕೋಲ ಉತ್ಸವ ಹಾಗೂ ಪ್ರಪ್ರಥಮ ರಥ–ೋತ್ಸವದ ಅದ್ಭುತ ದೃಶ್ಯವನ್ನು ನೆರೆದ ಸಾವಿರಾರು ಭಕ್ತರು ಕಣ್ತುಂಬಿಕೊಂಡರು. ರಾತ್ರಿ ಪ್ರಭುಲಿಂಗೇಶ್ವರ ಕಲೆ ಮತ್ತು ಸಾಂಸ್ಕೃತಿಕ ನಾಟ್ಯ ಸಂಘದ ನೇತೃತ್ವದಲ್ಲಿ ಜೇವರಗಿಯ ಗುರು ಪಂಚಾಕ್ಷರಿ ಗವಾಯಿ ನಾಟ್ಯ ಸಂಘದ ಕಲಾವಿದ–ರಿಂದ "ಶೆರೆ ಅಂಗಡಿ ಸಂಗವ್ವ" ಹಾಗೂ ಕರಿಸಿದ್ದೇಶ್ವರ ಯುವಕ ನಾಟ್ಯ ಸಂಘ ಕಲಾವಿದರಿಂದ "ಕಲಿತ ಜೀವಕ್ಕೆ ಬೆರೆತ ಜೀವ" ಎಂಬ ಎರಡು ನಾಟಕಗಳು ಪ್ರದರ್ಶನಗೊಂಡವು.

ಈ ಜಾತ್ರಾ ಮಹೋತ್ಸವದಲ್ಲಿ ಸಂಸದ ಪಿ. ಸಿ. ಗದ್ದಿಗೌಡರ, ಶಾಸಕ ಸಿದ್ದು ಸವದಿ, ಕವಿತಾ ಸಿದ್ದು ಕೊಣ್ಣೂರ, ಡಾ. ಎ. ಆರ್. ಬೆಳಗಲಿ ಸೇರಿದಂತೆ ಹಲವಾರು ಪ್ರಮುಖ ರಾಜಕಾರಣಿಗಳು, ಹಿರಿಯ ಅಧಿಕಾರಿಗಳು ಆಗಮಿಸಿದ್ದರು.

ಡಿವೈಎಸ್ಪಿ ಎಸ್. ರೋಷನ್ ಜಮೀರ, ಬನಹಟ್ಟಿ ಸಿಪಿಐ ಸಂಜು ಬಳಗಾರ ಮಾರ್ಗದರ್ಶದಲ್ಲಿ ಪಿಎಸ್‌ಐ ಶಾಂತಾ ಹಳ್ಳಿ ಸೂಕ್ತ ಬಂದೋಬಸ್ತ ಕೈಗೊಂಡಿದ್ದರು. ಸರ್ವ ಧರ್ಮಿಯರೂ ಸೇರಿ ನಡೆಸುವ ಈ ಜಾತ್ರೆಯಲ್ಲಿ ಸುಮಾರು 210 ಕೆ.ಜಿ. ಅಕ್ಕಿ, ಬೇಳೆ, 30 ಕ್ವಿಂಟಲ್ ಮಸಾಲೆ ಪದಾರ್ಥ–ಗಳಿಂದ ತಯಾರಿಸಲಾಗಿದ್ದ ಕಿಚಡಿ ಪ್ರಸಾದ ಕೇವಲ ಆರು ಗಂಟೆಯಲ್ಲಿ ಭಕ್ತಾಧಿಗಳು ಸ್ವೀಕರಿಸಿ ಪುನೀತರಾದರು.

# ಅತಿಥಿ ಉಪನ್ಯಾಸಕರನ್ನು ಒದಗಿಸಲು ಒತ್ತಾಯ: ವಿದ್ಯಾರ್ಥಿಗಳ ಪ್ರತಿಭಟನೆ

**ಕೊಪ್ಪಳ :** ಪದವಿ ವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರಿಲ್ಲದೆ ವಿದ್ಯಾರ್ಥಿಗಳಲ್ಲಿ ಉಂಟಾಗಿರುವ ಶೈಕ್ಷಣಿಕ ಗೊಂದಲಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಗುರುವಾರ ನಗರದ ಅಶೋಕ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.



ರಾಜ್ಯದಾದ್ಯಂತ ಪದವಿ ತರಗತಿಗಳು ಆರಂಭವಾಗಿ ತಿಂಗಳು ಕಳೆದರೂ ಇಲ್ಲಿಯವರೆಗೂ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಲಾಗಿಲ್ಲ. ರಾಜ್ಯದ ಬಹುತೇಕ ಸರ್ಕಾರಿ ಪದವಿ ಕಾಲೇಜುಗಳು ಅತಿಥಿ ಉಪನ್ಯಾಸಕರ ಮೇಲೆ ಅವಲಂಬಿತವಾಗಿದ್ದು, ಇಲ್ಲಿಯವರೆಗೂ ತರಗತಿಗಳು ಸರಿಯಾಗಿ ನಡೆಯದೇ ಇರುವುದರಿಂದ ವಿದ್ಯಾರ್ಥಿಗಳು ಸಾಕಷ್ಟು ಆತಂಕ ಎದುರಿಸುವಂತಾಗಿದೆ. ಇದು ಅವರ ಶೈಕ್ಷಣಿಕ ಭವಿಷ್ಯವನ್ನು ಅತಂತ್ರವನ್ನಾಗಿಸುತ್ತಿದೆ. ಮುಂದಿನ ತಿಂಗಳು ಪದವಿ ವಿದ್ಯಾರ್ಥಿಗಳ ಮೊದಲ ಆಂತರಿಕ ಪರೀಕ್ಷೆಗಳು ಆರಂಭಗೊಳ್ಳಲಿದ್ದು, ಪಾಠಗಳನ್ನು ಆಲಿಸದೆ ಪರೀಕ್ಷೆ ಎದುರಿಸಬೇಕಿದೆ. ಯುಜಿಸಿಯ ಹೊಸ ನಿರ್ದೇಶನಗಳ ಕುರಿತು ನ್ಯಾಯಾಲಯದಲ್ಲಿ ಮೊಕದ್ದಮೆ ನಡೆಯುತ್ತಿರುವುದರಿಂದ ಅತಿಥಿ ಉಪನ್ಯಾಸಕರ ನೇಮಕಾತಿಯು ನನೆಗುದಿಗೆ ಬಿದ್ದಿದೆ' ಎಂದು ವಿದ್ಯಾರ್ಥಿ ಪ್ರಮುಖರು ತಿಳಿಸಿದರು.

ಶೈಕ್ಷಣಿಕ ವಿಷಯಗಳಲ್ಲಿ ರಾಜ್ಯ ಸರ್ಕಾರವು ಕೇಂದ್ರದ ನಿರ್ಧಾರಗಳನ್ನು ಪಾಲಿಸುವುದು ಕಡ್ಡಾಯವಲ್ಲ ಎಂದು ಸರ್ವೋಚ್ಚ ನ್ಯಾಯಾಲಯದ ಸ್ಪಷ್ಟ ನಿರ್ದೇಶನವೇ ಇದೆ. ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಗೆ ಪೂರಕವಾದ ಸ್ಪಷ್ಟ ನಿಲುವು ತಾಳಬೇಕಿದೆ. ಆ ಮೂಲಕ ಶೈಕ್ಷಣಿಕ ಚಟುವಟಿಕೆಗಳು ಸರಾಗವಾಗಿ ನಡೆಯುವ ನಿಟ್ಟಿನಲ್ಲಿ ತುರ್ತಾಗಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು, ವಿದ್ಯಾರ್ಥಿಗಳ ಗೊಂದಲವನ್ನು ಪರಿಹರಿಸಬೇಕು' ಎಂದು ಆಗ್ರಹಿಸಿದರು.

ಸಂಘಟನೆಯ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಅಯ್ಯಾಳಪ್ಪ, ರಾಜ್ಯ ಸಮಿತಿ ಸದಸ್ಯೆ ಸಿಂಧು, ಜಿಲ್ಲಾ ಸಂಚಾಲಕ ಗಂಗರಾಜ ಅಳ್ಳಳ್ಳಿ, ಜಿಲ್ಲಾ ಸಂಘಟನಕಾರ ಪ್ರದೀಪ್, ವಿದ್ಯಾರ್ಥಿಗಳಾದ ಶರಣಪ್ಪ, ಅಪ್ಪಾಜಿ, ಸಾವಿತ್ರಿ, ಲಕ್ಷ್ಮಿ, ತುಳಸಿ ಇದ್ದರು.

# ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟ



**ಕುಷ್ಟಗಿ :** ಪಟ್ಟಣದಲ್ಲಿ ಬುಧವಾರ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟ ಆರಂಭಗೊಂಡಿತು.

ಕಾರ್ಯಕ್ರಮ ಉದ್ಘಾಟಿಸಿದ ಪುರಸಭೆ ಅಧ್ಯಕ್ಷ ಮಹಾಂತೇಶ ಕಲಭಾವಿ ಮಾತನಾಡಿ, ಕ್ರೀಡೆಗಳು ಮಾನವನ ಬದುಕಿನ ದೈಹಿಕ ಚಟುವಟಿಕೆಗಳ ಅವಿಭಾಜ್ಯಅಂಗವಾಗಿರುತ್ತದೆ. ಕ್ರೀಡೆಗಳಲ್ಲಿಹಲವಾರು ವಿಭಾಗಗಳಿದ್ದರೂ ದೈಹಿಕ, ಮಾನಸಿಕ ಬೆಳವಣಿಗೆಗೆ ಪೂರಕವಾಗಿರುತ್ತವೆ.

ಯುವಕರು, ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು.

ದೈಹಿಕ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಮಹಾಂತೇಶ ಜಾಲಿಗಿಡದ ದಸರಾ ಕ್ರೀಡಾಕೂಟದ ಉದ್ದೇಶ, ಯುವಕರ ಭಾಗವಹಿಸುವಿಕೆಯ ಮಹತ್ವ ಕುರಿತು ವಿವರಿಸಿದರು.

ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ನಾಗಪ್ಪ ಬಿಳಿಯಪ್ಪನವರ ಕ್ರೀಡಾ ಧ್ವಜಾರೋಹಣ ನೆರವೇರಿಸಿದರು. ಪುರಸಭೆ ವ್ಯವಸ್ಥಾಪಕ ಬಸವರಾಜ, ನೈರ್ಮಲ್ಯ ನಿರೀಕ್ಷಕ ಪ್ರಾಣೇಶ ಬಳ್ಳಾರಿ, ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷ ಜಗದೀಶ ಸೂಡಿ, ಪ್ರೌಢಶಾಲೆ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ನಾಗರಾಜ್ ನಿಡಗುಂದಿ, ಪ್ರಾಥಮಿಕ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಹನೀಫ್ ಬಿಳೆಕುದರಿ, ಬಸವರಾಜ ಗುಡೂರು, ಗವಿಸಿದ್ದಪ್ಪ ನಾಗಲೀಕರ, ರಮೇಶ ಮೇಲಿನಮನಿ ಇದ್ದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸ್ವಾಮಿ ವಿವೇಕಾನಂದ ಕ್ರೀಡಾ ಸಂಸ್ಥೆ ವತಿಯಿಂದ ನಡೆದ ಕ್ರೀಡಾಕೂಟದಲ್ಲಿ ಅನೇಕ ಕ್ರೀಡಾಪಟುಗಳು ಪಾಲ್ಗೊಂಡಿದ್ದರು.

# ಶಿಕ್ಷಕರ ದಿನಾಚರಣೆ ವಿಶೇಷ: 'ಶಿಕ್ಷಕರ ತವರೂರು' ಅಳವಂಡಿ

**ಅಳವಂಡಿ :** ಅಳವಂಡಿಯಲ್ಲಿ ಬಹುತೇಕ ಮನೆಯಲ್ಲಿ ಕನಿಷ್ಠ ಒಬ್ಬರಾದರೂ ಶಿಕ್ಷಕರು ಇದ್ದಾರೆ. ಒಂದೇ ಮನೆಯಲ್ಲಿ ಐದಾರು ಶಿಕ್ಷಕರಿರುವಹಲವುಕುಟುಂಬಗಳು ಇಲ್ಲಿವೆ. ಅಳವಂಡಿಯಲ್ಲಿ ಎಲ್ಲೇ ನಿಂತು ಒಂದು ಕಲ್ಲನ್ನು ಎಸೆದರೆ, ಅದು ಒಬ್ಬ ಶಿಕ್ಷಕರ ಅಂಗಳದಲ್ಲಿ ಹೋಗಿ ಬೀಳುವದೆಂಬ ಪ್ರತೀತಿ ಇದೆ.



ಕೊಪ್ಪಳ ತಾಲ್ಲೂಕಿನ ಅಳವಂಡಿ ಜಿಲ್ಲೆಯ ದೊಡ್ಡ ಹೋಬಳಿ ಕೇಂದ್ರವಾಗಿ ಗುರುತಿಸಿಕೊಂಡಿದೆ. ಸಾಹಿತ್ಯ,ಕಲೆ,ಸಂಸ್ಕೃತಿ,ಭಾವೈಕ್ಯಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಾ ಬಂದಿದೆ. ಅದರಂತೆ ಶಿಕ್ಷಣ ಕ್ಷೇತ್ರದಲ್ಲೂಮುಂಚೂಣಿಯಲ್ಲಿದೆ.

1980ರ ದಶಕದಲ್ಲಿ ಪಿಯುಸಿ ನಂತರ ಐಟಿಸಿ ಎಂಬ ಶಿಕ್ಷಕ ವೃತ್ತಿಯ ತರಬೇತಿಯ ಒಂದು ಕೋರ್ಸ್ ಸಮೀಪದ ಗದಗ ಜಿಲ್ಲೆ ಮುಂಡರಗಿಯ ಕೆ.ಆರ್.ಬೆಲ್ಲದ ಕಾಲೇಜಿನಲ್ಲಿ ಆರಂಭವಾಗಿತ್ತು. ಹಾಗಾಗಿ ಅಳವಂಡಿಯ ಸಿದ್ದೇಶ್ವರ ಪಿಯು ಕಾಲೇಜಿನಲ್ಲಿ ಶಿಕ್ಷಣ ವಿಷಯದಲ್ಲಿ ಪಿಯುಸಿ ಆಯ್ಕೆ ಮಾಡಿಕೊಂಡು ಓದಿದವರು ಮುಂಡರಗಿಯ ಕೆ.ಆರ್.ಬೆಲ್ಲದ ಕಾಲೇಜಿನಲ್ಲಿ ಐಟಿಸಿ ಶಿಕ್ಷಕ ತರಬೇತಿಯನ್ನು ಮುಗಿಸಿಕೊಂಡು, ಬಳಿಕ ಶಿಕ್ಷಕ ವೃತ್ತಿಗೆ ಪಾದಾರ್ಪಣೆ ಮಾಡುತ್ತಿದ್ದರು.

ನಂತರ ಕೆಲ ದಿನಗಳ ಬಳಿಕ ಅಳವಂಡಿಯಲ್ಲಿ ಕೂಡ ಟಿಸಿಎಚ್ ಕಾಲೇಜು ಪ್ರಾರಂಭವಾಯಿತು. ಇದರಿಂದ ಬಡ, ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶ ಅವಕಾಶ ನೀಡಲಾಯಿತು. ಹಾಗಾಗಿ ಅನೇಕರಿಗೆ ಶಿಕ್ಷಕರು ಆಗುವ ಸೌಭಾಗ್ಯ ದೊರೆಯಿತು ಎಂದು ಇಲ್ಲಿನ ಶಿಕ್ಷಕರು ಹೇಳುತ್ತಾರೆ.

ಮಾಹಿತಿ ಪ್ರಕಾರ ರಾಜ್ಯದ ಅನೇಕ ಭಾಗಗಳಲ್ಲಿ ಇಲ್ಲಿಯ ಶಿಕ್ಷಕರು ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಶಿಕ್ಷಕರಾಗಿ, ಉಪನ್ಯಾಸಕರಾಗಿ ಸುಮಾರು 400 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಸುಮಾರು 100 ಜನ ಶಿಕ್ಷಕರು ನಿವೃತ್ತರಾಗಿದ್ದಾರೆ.

ಆದರೆ ಇತ್ತೀಚಿನ ದಿನಗಳಲ್ಲಿ ನಡೆದ ಶಿಕ್ಷಕರ ನೇಮಕಾತಿಗಳಲ್ಲಿ ಅಳವಂಡಿ ಗ್ರಾಮದಿಂದ ಕಡಿಮೆ ಸಂಖ್ಯೆಯಲ್ಲಿ ಆಯ್ಕೆಯಾಗಿರುವುದು ನೋವಿನ ಸಂಗತಿ. ಇಂದಿನ ದಿನಗಳಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿದೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸುವಲ್ಲಿ ಇಂದಿನ ಪೀಳಿಗೆ ವಿಫಲವಾಗುತ್ತಿದೆ. ಯುವಕರಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವವರ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ಶಿಕ್ಷಕರೊಬ್ಬರು ಕಳವಳ ವ್ಯಕ್ತಪಡಿಸಿದರು.

# ಡೋಲು ಕುಣಿತದೊಂದಿಗೆ ಗಣೇಶ ವಿಸರ್ಜನೆ



**ಯಲಬುರ್ಗಾ :** ಪಟ್ಟಣದ ಎರಡನೇ ವಾರ್ಡಿನ ಕಂಡೇರ್ ಓಣಿಯ ಕಾಮನಕಟ್ಟಿಯಲ್ಲಿ ಭಗತ್ ಸಿಂಗ್ ಯುವಕ ಮಂಡಳಿಯ ವತಿಯಿಂದ ಗಣೇಶ ಚತುರ್ಥಿ ಆಚರಣೆಯ ಮುಕ್ತಾಯ ಕಾರ್ಯಕ್ರಮ ಗುರುವಾರ ಅದ್ದೂರಿಯಾಗಿ ಜರುಗಿತು.

ಆಚರಣೆ ಪ್ರಯುಕ್ತ ರಕ್ತದಾನ ಶಿಬಿರ, ಸಾಧಕರ ಸನ್ಮಾನ, ರಸಮಂಜರಿ ಹೀಗೆ ವಿವಿಧ ರಚನಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಬೆಳಗಾವಿ ಮೂಲದ ಕಲಾವಿದರು ಡೋಲು ಕುಣಿತದಲ್ಲಿಯೇ ನೋಡುಗರ ಮನಸೂರೆಗೊಳ್ಳುವ ರೀತಿಯಲ್ಲಿ ವಿಸರ್ಜನೆಗೆ ಮುಂದಾಗಿದ್ದು ಪಟ್ಟಣದ ಜನತೆ ಮೆಚ್ಚುವಂತೆ ಮಾಡಿದ್ದು ಈ ವರ್ಷದ ವಿಶೇಷವಾಗಿತ್ತು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಧರ ಮುರಡಿ ಹಿರೇಮಠದ ಪೀಠಾಧಿಕಾರಿ ಬಸವಲಿಂಗೇಶ್ವರ ಸ್ವಾಮೀಜಿ, ವರ್ತಕ ಬಸವಲಿಂಗಪ್ಪ ಭೂತೆ, ಗಣ್ಯರಾದ ವೀರಣ್ಣ ಹುಬ್ಬಳ್ಳಿ, ಅಮರೇಶ,

ಅಂದಯ್ಯ ಕಳ್ಳಿಮಠ ಸೇರಿ ಅನೇಕರು ಮಾತನಾಡಿ ಸಂಘಟನೆಯ ಕಾರ್ಯವೈಖರಿಯನ್ನು ಗುಣಗಾನ ಮಾಡಿದರು. ಭಗತ್ ಸಿಂಗ್ ಯುವಕ ಮಂಡಳದ ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು ನೇತೃತ್ವ ವಹಿಸಿದ್ದರು.

## ಗ್ರಾ.ಪಂ. ಸಬಲೀಕರಣಗೊಂಡರೆ ನಿಜವಾದ ಗ್ರಾಮ ಸ್ವರಾಜ್: ಚನ್ನರಾಜ ಹಟ್ಟಿಹೊಳಿ

**ಖಾನಾಪುರ :** ಗ್ರಾ.ಪಂ.ಗಳು ಸಬಲೀಕರಣಗೊಂಡಾಗ ನಿಜವಾದ ಗ್ರಾಮಸ್ವರಾಜ್ ಸಾಧ್ಯ ಹಾಗಾಗಿ ಕಾಂಗ್ರೆಸ್ ಸರಕಾರ ಅಧಿಕಾರ ವಿಕೇಂದ್ರೀಕರಣ ಮತ್ತು ಸ್ಥಳೀಯಾಡಳಿತಗಳಿಗೆ ಬಲತುಂಬುವ ಕೆಲಸಗಳನ್ನು ಮಾಡಿಕೊಂಡು ಬರುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹೇಳಿದರು.ಜಿಲ್ಲಾಡಳಿತ, ಜಿಲ್ಲಾ ಪಂಚಾಯತ,ಬೆಳಗಾವಿ ತಾಲೂಕ ಪಂಚಾಯತ, ಖಾನಾಪುರ ಹಾಗೂ ಗ್ರಾಮ ಪಂಚಾಯಿತಿ ಬಿಜಗರ್ಣಿ ಇವರ ಸಂಯುಕ್ತ ಆಶ್ರಯದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ಮಿಸಲಾದ ಬಿಜಗರ್ಣಿ ಗ್ರಾಮ ಪಂಚಾಯಿತಿ ನೂತನ ಕಟ್ಟಡ, ಡಿಜಿಟಲ್ ಗ್ರಂಥಾಲಯ ಹಾಗೂ ಸಂಜೀವಿನಿ ಶೆಡ್ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ರಾಜೀವ ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಅಧಿಕಾರ ವಿಕೇಂದ್ರೀಕರಣ ಜಾರಿಗೆ ತಂದರು. ಮನಮೋಹನ ಸಿಂಗ್ ಅವರು ಪ್ರಧಾನಿಯಿದ್ದಾಗ ನರೇಗಾ ಯೋಜನೆ ಜಾರಿಗೊಳಿಸಿ ಗ್ರಾಮ ಪಂಚಾಯಿತಿಗಳಿಗೆ ಬಲ ತುಂಬಿದರು. ಅಲ್ಲಿಯವರೆಗೆ ಗ್ರಾಮ ಪಂಚಾಯಿತಿಗಳಲ್ಲಿ ವಿದ್ಯುತ್ ಬಿಲ್ ತುಂಬಲು ಸಹ ಹಣವಿರುತ್ತಿರಲಿಲ್ಲ. ಈಗ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಮಹತ್ವ ಬಂದಿದ್ದು, ಸರಕಾರದ ಯೋಜನೆಗಳು ಗ್ರಾಮಸಭೆಗಳ ಮೂಲಕವೇ ಜಾರಿಯಾಗಬೇಕೆನ್ನುವುದು ನಮ್ಮ ಉದ್ದೇಶವಾಗಿದೆ ಎಂದು ಅವರು ಹೇಳಿದರು.ಈ ವೇಳೆ ಶಾಸಕರಾದ ವಿಠ್ಠಲ ಹಲಗೇಕರ್, ತಾಲೂಕಾ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ರಮೇಶ್ ಮೆತ್ರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಯಲ್ಲಪ್ಪ ಭಜಂತ್ರಿ, ಗ್ರಾಮ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವಸದಸ್ಯರು ಉಪಸ್ಥಿತರಿದ್ದರು.

# ಪ್ರವಾಹ ಪೀಡಿತ ಗ್ರಾಮಗಳಿಗೆ ಈರಣ್ಣ ಕಡಾಡಿ ಭೇಟಿ

**ಮೂಡಲಗಿ :** ಘಟಪ್ರಭಾ ನದಿಯ ಪ್ರವಾಹದಿಂದ ರೈತರು ಬೆಳೆದ ಕೋಟ್ಯಂತರರೂಪಾಯಿಮೌಲ್ಯದ ಬೆಳೆಗಳು ನೀರು ಪಾಲಾಗಿದ್ದು, ವಿದ್ಯುತ್ ಪರಿಕರಗಳು, ರಸ್ತೆಗಳು ಹಾಳಾಗಿದ್ದು ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಕಷ್ಟಪಟ್ಟು ಬೆಳೆದ ಬೆಳೆ ಕೈಗೆ ಬರುವ ಮುಂಚೆ ಹಾನಿಯಾಗಿದೆ. ರಾಜ್ಯ ಸರ್ಕಾರ ಈ ಕೂಡಲೇ ಎಸ್.ಡಿ.ಆರ್.ಎಫ್. ನಿಧಿಯ ಜೊತೆಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಿ ಸಂತ್ರಸ್ತರ ರೈತರ ನೆರವಿಗೆ ಧಾವಿಸಬೇಕು ಎಂದು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಆಗ್ರಹಿಸಿದರು.



ಶುಕ್ರವಾರ ತಾಲೂಕಿನ ಘಟಪ್ರಭಾ ನದಿ ತೀರದ ಪ್ರವಾಹ ಪೀಡಿತ ಗ್ರಾಮಗಳಾದ ಅವರಾದಿ, ಅರಳಿಮಟ್ಟಿ, ಢವಳೇಶ್ವರ ಹಾಗೂ ಮಸಗುಪ್ಪಿ ಗ್ರಾಮಗಳಿಗೆ ಭೇಟಿ ನೀಡಿ ಪ್ರವಾಹದಿಂದ ಉಂಟಾದ ಹಾನಿಗಳನ್ನು ತಾಲೂಕಾ ಮಟ್ಟದ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಈ ಸಲ ವಾಡಿಕೆ ಪ್ರಮಾಣಕ್ಕಿಂತ ಹೆಚ್ಚು ಮಳೆಯಾಗಿದೆ. ಕಳೆದ ಜೂನ್ 1 ರಿಂದ ಸಪ್ಟೆಂಬರ್ 4 ರವರೆಗೆ ವಾಡಿಕೆ ಮಳೆಯ ಪ್ರಮಾಣ 487 ಮಿ. ಮೀ. ಆಗಬೇಕಿತ್ತು. ಆದರೆ, ಪ್ರಸ್ತುತ 609 ಮಿ.ಮೀ. ಮಳೆಯಾಗಿದೆ. ಹೆಚ್ಚುವರಿಯಾಗಿ 122 ಮಿ.ಮೀ. ಮಳೆಯಾಗಿದೆ. ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿಒಟ್ಟು7.25ಲಕ್ಷಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಧಾರಾಕಾರ ಮಳೆ ಹಾಗೂ ನದಿಗಳ ಪ್ರವಾಹದಿಂದ ಜಿಲ್ಲೆಯಲ್ಲಿ ಪ್ರಾಥ–ಮಿಕ ವರದಿ ಪ್ರಕಾರ ಸುಮಾರು 55 ಸಾವಿರ ಹೆಕ್ಟೇರ್ ಪ್ರದೇಶದಲ್ಲಿನ ಕೃಷಿ ಬೆಳೆ ಹಾನಿಗೀಡಾಗಿದೆ.

ನದಿ ತೀರದಲ್ಲಿದ್ದ 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿನ ಕಬ್ಬು, 31,970 ಹೆಕ್ಟೇರ್ ಹೆಸರು, 12 ಸಾವಿರ ಹೆಕ್ಟೇರ್ ಗೋವಿನ ಜೋಳ, 3,500 ಹೆಕ್ಟೇರ್ ಪ್ರದೇಶದಲ್ಲಿನ ಸೋಯಾಬಿನ್ ಬೆಳೆ ಹಾನಿಗೀಡಾಗಿದೆ. 11 ಸಾವಿರ ಹೆಕ್ಟೇರ್ ಭತ್ತ ಸೇರಿದಂತೆ ಇತರೆ ಬೆಳೆ ನೀರು ಪಾಲಾಗಿವೆ. 1,545 ಹೆಕ್ಟೇರ್ಗಿಂತ ಹೆಚ್ಚು ತೋಟಗಾ–ರಿಕೆ ಬೆಳೆಗಳು ಹಾನಿಗೀಡಾಗಿವೆ ಎಂದರು.

ಮೂಡಲಗಿ ತಾಲೂಕು ಮತ್ತು ಅರಭಾಂವಿ ಕ್ಷೇತ್ರದಲ್ಲಿ ಈ ಪ್ರವಾಹದಲ್ಲಿ ಸುಮಾರು 2,520 ಹೆಕ್ಟೇರ್ ಕೃಷಿ ಬೆಳೆ ಮತ್ತು ತೋಟಗಾರಿಕೆ ಬೆಳೆ, ಜಲಾವೃತಗೊಂಡು ರೈತರು ಕಂಗಾಲಾಗಿದ್ದಾರೆ. ರಾಜ್ಯದ ಅಭಿವೃದ್ಧಿಗೆ ಹಣ ನೀಡಲು ಸರ್ಕಾರದ ಬಳಿ ಹಣವಿಲ್ಲ.

ಆದರೆ ರಾಜ್ಯದ ಮಂತ್ರಿಗಳಿಗೆ ಸುತ್ತಾಡಲು ಹೆಲಿಕ್ಯಾಪ್ಟರ್ಗಳನ್ನು ಖರೀದಿಸಲು ಹಣವಿದೆ ಎಂದರಲ್ಲದೇ ಜಿಲ್ಲಾ ಉಸ್ತುವಾರಿ ಸಚಿವರು ಪ್ರವಾಹದಿಂದ ಹಾನಿಗೀಡಾದ ಬೆಳೆಗಳ ವೀಕ್ಷಣೆ ಮಾಡಿ, ರೈತರಿಗೆ ಭರವಸೆ ತುಂಬುವ ಕೆಲಸವೇ ಮಾಡುತ್ತಿಲ್ಲ. ಬೆಳಗಾವಿಯ ಡಿಸಿಸಿ ಬ್ಯಾಂಕ ಚುನಾವಣೆಯಲ್ಲಿ ಕಾರ್ಯನಿರತರಾಗಿದ್ದಾರೆ. ರಾಜ್ಯದ ಮಂತ್ರಿಗಳು ಸಹ ಬಿಹಾರ ಚುನಾವಣೆಯಲ್ಲಿ ಕಾರ್ಯನಿರತರಾಗಿದ್ದಾರೆ. ಇ ಇಂಥವರಿಂದ ಪರಿಹಾರ ನಿರೀಕ್ಷೆ ಮಾಡುವುದು ಸಾಧ್ಯವೇ ? ರೈತರ ಬದುಕಿಗೆ ಗ್ಯಾರಂಟಿ ನೀಡದ ಅಸಮರ್ಥ ಸರ್ಕಾರ..! ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ನೋಡಲ್ ಅಧಿಕಾರಿ ಅನೀಲ ಹೆಗಡೆ, ಗ್ರೇಡ್–1 ತಹಸೀಲ್ದಾರ್ ಶಿವಾನಂದ ಬಬಲಿ, ತಾಲೂಕು ಪಂಚಾಯತ್ ಸಹಾಯಕನಿರ್ದೇಶಕ ಎಸ್.ಎಸ್ ರೊಡ್ಡನ್ನವರ, ಕೃಷಿ ಇಲಾಖೆಯ ಪರಪ್ಪ ಹುಲಗಬಾಳಿ, ಬೆಳಗಾವಿ ಗ್ರಾಮೀಣ ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಸ ಪಾಟೀಲ, ಅವರಾದಿ ಗ್ರಾಮ ಪಂಚಾಯತ್ ಅಧ್ಯಕ್ಷ ಮಲ್ಲನಗೌಡ ಪಾಟೀಲ, ಶ್ರೀಶೈಲ ಪೂಜೇರಿ, ಸಿ. ಎಲ್. ನಾಯಕ, ಶಿವಪ್ಪ ಪೂಜೇರಿ, ಲಕ್ಷ್ಮಣ ಉಟಗಿ, ಗಂಗಾಧರ ಹಿರೇಮಠ, ರಾಮನಗೌಡ ಪಾಟೀಲ, ಬಸವರಾಜ ಪಿಡಶೆಟ್ಟಿ, ರಂಗಪ್ಪ ಉಪ್ಪಾರ, ರಾಜು ಉಪ್ಪಾರ, ಗೋವಿಂದ ಚನ್ನಾಳ ಸೇರಿದಂತೆ ವಿವಿಧ ಇಲಾಖೆಯ ಅಧಿಕಾ–ರಿಗಳು, ಗ್ರಾಮ ಪಂಚಾಯತ್ ಪಿಡಿಓ, ಗ್ರಾಮ ಆಡಳಿತಾಧಿಕಾ–ರಿಗಳು ಹಾಗೂ ಗ್ರಾಮಗಳ ರೈತರು ಉಪಸ್ಥಿತರಿದ್ದರು.

# ನರೇಗಾ ಅವ್ಯವಹಾರ ಕೇಂದ್ರ ತಂಡದ ಪರಿಶೀಲನೆ

**ಆಳಂದ :** ತಾಲೂಕಿನಲ್ಲಿ ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಭಾರೀ ಅವ್ಯವಹಾರ ಆಗಿದೆ ಎನ್ನುವ ದೂರಿಗೆ ಸಂಬಂಧಿಸಿದಂತೆ ಕೇಂದ್ರದ ತನಿಖಾ ತಂಡ ಆಳಂದ ತಾಲೂಕಿನಲ್ಲಿ 2 ದಿನಗಳ ಕಾಲ ಒಡಾಡಿ ಪರಿಶೀಲನೆ ನಡೆಸಿತು.



ಆಳಂದ ತಾಲೂಕಿನಲ್ಲಿ ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೈಗೊಂಡಿದ್ದ 426 ತೆ–ರೆದ ಬಾವಿಗಳ ಕಾಮಗಾರಿಯಲ್ಲಿ ಕಾರ್ಮಿಕರನ್ನು ಬಳಸದೇ ಯಂತ್ರಗಳನ್ನು ಬಳಸಿ ಕಾಮಾಗಾರಿ ಮಾಡಲಾಗಿದೆಯೆಂದು, ಕಾರ್ಮಿಕರಲ್ಲದೇ ಇರುವವರ ಹೆಸರಿನ ಮೇಲೆ ಎನ್ಎಂಆರ್ ತೆಗೆದು ಹಣ ಲೂಟಿ ಹೊಡೆಯಲಾಗಿದೆಯೆಂದು ಹಾಗೂ ಸತ್ತವರ ಹೆಸರಿನ ಮೇಲೆ ಕಾಮಗಾರಿ ಮಂಜೂರಿ ಮಾಡಲಾಗಿದೆಯೆಂದು ಸೇರಿದಂತೆ ಅನೇಕ ಆರೋಪಗಳನ್ನು ದಾಖಲಿಸಿ ಮಾಜಿ ಶಾಸಕ ಸುಭಾಷ ಆರ್ ಗುತ್ತೇದಾರ ಅವರು ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ದೂರು ಸಲ್ಲಿಸಿದ್ದರು.

ದೂರಿಗೆ ಸಂಬಂಧಿಸಿದಂತೆ ತನಿಖಾ ತಂಡವು ಆಳಂದ ತಾಲೂಕಿನ ಕಡಗಂಚಿ, ಧರ್ಮವಾಡಿ, ಜಿಡಗಾ, ದೇಗಾಂವ, ನಸೀರವಾಡಿ, ಹಾಳ ತಡಕಲ ಗ್ರಾಮಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ಪರಿಶೀಲನೆ ನಡೆಸಿತು.

ಆಳಂದ ತಾಲೂಕಿನ ವಿವಿಧ ಗ್ರಾಮ ಪಂಚಾಯತಿಗಳಲ್ಲಿ

ಕೈಗೊಂಡಿರುವ ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆಯಲ್ಲಿ ನಿಯಮಾವಳಿಗಳನ್ನು ಮೀರಿ ವ್ಯಾಪಕ ಭ್ರಷ್ಟಾಚಾರ ಎಸಗಲಾಗಿದೆ. ಕಾರ್ಮಿಕರನ್ನು ಬಳಸದೇ ಯಂತ್ರಗಳನ್ನು ಬಳಸಿ ನರೇಗಾ ಅಡಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಗ್ರಾಮದಲ್ಲಿ ವಾಸ ಆಗದೆ ಇರುವವರ ಹೆಸರನ್ನು, ವಿದ್ಯಾರ್ಥಿಗಳ ಹೆಸರನ್ನು, ಅರೆ ಸರ್ಕಾರಿ ನೌಕರರ ಹೆಸರನ್ನು, ಹೊರ ರಾಜ್ಯದಲ್ಲಿ ವಾಸವಾಗಿರುವವರ ಹೆಸರನ್ನು, ವಿದೇಶದಲ್ಲಿ ವಾಸವಾಗಿರುವವರ ಹೆಸರನ್ನು ಹಾಜರಿಯಲ್ಲಿ ಹಾಕಿ ವ್ಯಾಪಕ ಭ್ರಷ್ಟಾಚಾರ ಎಸಗಲಾಗಿದೆ. ಕೇವಲ ತಮ್ಮ ಪಕ್ಷದ ಮುಖಂಡರ, ಕಾರ್ಯಕರ್ತರ ಹೊಲಗಳಲ್ಲಿ ಕಾಮಗಾರಿಗಳನ್ನು ಇಟ್ಟು ಕಾಮಗಾರಿಗಳನ್ನು ಮಾಡಲಾಗಿದೆ ಎಂದು ದೂರಲಾಗಿತ್ತು.

ಕಾಮಗಾರಿಗಳನ್ನು ಕೇವಲ ಕಾಗದದಲ್ಲಿ ತೋರಿಸಿ, ಹಣವನ್ನು ದುರುಪಯೋಗ ಮಾಡಲಾಗಿದೆ. ಇಂತಹ ಭ್ರಷ್ಟಾಚಾರವನ್ನು ತಡೆಯಲು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾರ್ವಜನಿಕ ನಿಗಾವಳಿ ಮತ್ತು ಸಾಮಾಜಿಕ ಪರಿಶೀಲನೆಗಳನ್ನು ಪ್ರೋತ್ಸಾಹಿಸಲಾಗುತ್ತದೆ.

ಸಾಮಾಜಿಕ ಪರಿಶೀಲನೆಗಳ

ಮೂಲಕ ಯೋಜನೆಯ ಕಾರ್ಯಕ್ಷಮತೆ ಮತ್ತು ನಿಖರತೆಯನ್ನು ಪರಿಶೀಲಿಸಬೇಕು ಎಂದು ತನಿಖಾ ತಂಡಕ್ಕೆ ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ ಮನವಿ ಮಾಡಿದರು.

# ಮುಧೋಳದಲ್ಲಿ ಉದ್ಯೋಗ ಮೇಳ

**ಮುಧೋಳ :** ಆತ್ಮೀಯ ಉದ್ಯೋಗಾಂಕ್ಷಿಗಳೇ.ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ, ಬಾಗಲಕೋಟೆ ಮತ್ತು RB T ಫೌಂಡೇಶನ್ ಮುಧೋಳ ರವರ ಸಹಯೋಗದೊಂದಿಗೆ ದಿ. 16 ರಂದು ಉದ್ಯೋಗ ಮೇಳ ಆಯೋಜಿಸಲಾಗಿದೆ.

ಈ ಉದ್ಯೋಗ ಮೇಳದಲ್ಲಿ 30ಕ್ಕಿಂತ ಹೆಚ್ಚು ಖಾಸಗಿ ಕಂಪನಿಗಳು ಬಾಗವಹಿಸುತ್ತಿದ್ದು ತಮ್ಮಲ್ಲಿರುವ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಆಸಕ್ತ ಪುರುಷ ಮತ್ತು ಮಹಿಳಾ ಉದ್ಯೋಗಾಂಕ್ಷಿಗಳು ಈ ಉದ್ಯೋಗ ಮೇಳದಲ್ಲಿ ಬಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಅಭ್ಯರ್ಥಿಗಳು ಆನ್ಲೈನ್ ನೋಂದಣಿ ಮಾಡಿಕೊಳ್ಳುವ ಮೂಲಕ ಉದ್ಯೋಗ ಮೇಳದಲ್ಲಿ ಬಾಗವಹಿಸಬಹುದಾಗಿದೆ.

ಉದ್ಯೋಗ ಮೇಳವು ಸಂಪೂರ್ಣ ಉಚಿತವಾಗಿರುತ್ತದೆ. ಮತ್ತು ಅಭ್ಯರ್ಥಿಗಳು ಯಾವುದೇ ರೀತಿಯ ಫೀ, ಸೇವಾ ಶುಲ್ಕ–ಇತರ ಯಾವುದೇ ಕಾರಣಗಳಿಂದ ಹಣವನ್ನು ಯಾರಿಗೂ ನೀಡುವಂತಿಲ್ಲ.

ಸ್ಥಳ : ದಾನಮ್ಮ ದೇವಿ ದೇವಸ್ಥಾನ ( ಕಲ್ಯಾಣ ಮಂಟಪ) ತಹಶಿಲ್ದಾರ್ ಆಫೀಸ್ ಎದುರುಗಡೆ ಮುದೋಳ ಸಮಯ –ಬೆಳಿಗ್ಗೆ 10:00 ರಿಂದ ಸಾಯಂಕಾಲ 04:00 ರವರೆಗೆ.ನಡೆಸಲಾಗುವದು ಎಂದು ಸಚಿವರ ಪುತ್ರ ರಾದ ವಿನಯ ತಿಮ್ಮಾಪುರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜನುಮದಿನದ ಪ್ರಯುಕ್ತ ರಕ್ತದಾನ ಮಾಡಿದ ರಕ್ತದಾನಿಗಳು

**ಇಲಕಲ್ :** ಸೆಪ್ಟಂಬರ್ 4 ಗುರುವಾರ ದಿನದಂದು ಅಂಜುಮನ್ ಇಸ್ಲಾಂ, ಇಲಕಲ್ ಅಹಲೇ ಸುನ್ನತ್ ವಲ್ ಜಮಾತ್, ಹಾಗೂ ಜಮಾತೆ ಇಸ್ಲಾಮಿ ಹಿಂದ್ ಹಾಗೂ ಇನ್ನುಳಿದ ಎಲ್ಲ ಜಮಾತಿನ ಆದಿಯಾಗಿ ಅಂಜುಮನ್ ಶಾದಿ ಮಹಲ್ ದಲ್ಲಿ, ಹಾಗೂ ನಗರದ ಮದೀನಾ ಶಾದಿ ಮಹಲ್ ದಲ್ಲಿ ಬೃಹತ್ ರಕ್ತದಾನ ಶಿಬಿರ ನಡೆಯಿತು.

ರಕ್ತದಾನ ಶಿಬಿರದಲ್ಲಿ ರಕ್ತದಾನಿಗಳು ಪಾಲುಗೊಂಡು ಪರವಾದಿ ಮಹಮ್ಮದ್ ಪೈಗಂಬರ್ ಅವರ ಜನುಮದಿನದ ಪ್ರಯುಕ್ತ ರಕ್ತದಾನ ಮಾಡಿದರು.

ರಕ್ತದಾನಿಗಳಿಗೆ ಹಾಗೂ ಇದಕ್ಕೆ ಸಹಕರಿಸಿ ತುಂಬಾ ಅಚ್ಚುಕಟ್ಟಾಗಿ ಕೆಲಸ ಮಾಡಿ ರಕ್ತದಾನಿಗಳಿಗೆ ಫೋನ್ ಮೂಲಕ ಸಂಪರ್ಕಿಸಿ ಅವರನ್ನು ಕರೆತಂದು ಈ ಪುಣ್ಯದ ಕೆಲಸದಲ್ಲಿ ವ್ಯಾಲೆಂಟಿಯರ್ ರೀತಿಯಲ್ಲಿ ಕೆಲಸ ಮಾಡಿದ ಎಲ್ಲಾ ಜಮಾತಿನ ಸದಸ್ಯರಿಗೆ ಉಸ್ಮಾನ್ ಗನಿ ಹುಮ್ನಾಬಾದ, ಅಭಿನಂದನೆಗಳನ್ನು ಸಲ್ಲಿಸಿದರು.

**ವರದಿಗಾರ:**
**ಸೈಯದ್ ಸಿರಾಜ್ ಖಾಜಿ**

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State